# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 306 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 15.06.2025 • ಭಾನುವಾರ • ಪುಟ:04 • ಬೆಲೆ:2
Volume:02 • Issue: 306 • PRGI No:KARKAN/2023/88055 • VIJAYANAGARA • 15.06.2025 • Sunday • Page:04 • Rs:2




Grow with Us, Advertise in Hampi Times
Print & Digital Media
"Looking to bring your sales and services to readers Fingertips? HAMPI TIMES is the ideal platform"

Call:9448633038/email:hampitimes@gmail.com


## ಆನಂದ ಬಾಣ

ಸಾರ್ವಜನಿಕರಿಗೆ ಚಿತ್ರಕಲಾ ಸ್ಪರ್ಧೆ 25 ಕೋಟಿ ಮೀಸಲು.
ಡಿ.ಸಿ.ಎಂ




# ಕೆಕೆಆರ್‌ಡಿಬಿಗೆ ಸರ್ಕಾರ ಮೂರು ವರ್ಷದಲ್ಲಿ 13000 ಕೋಟಿ ನೀಡಿ ದಾಖಲೆ ನಿರ್ಮಿಸಿದೆ: ಸಿಎಂ

## ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ ಸಂವಿಧಾನ ತಿದ್ದುಪಡಿ ಮಾಡಿ 371 ಜೆ ಜಾರಿಗೆ ಮನಮೋಹನ್ ಸಿಂಗ್, ಮಲ್ಲಿಕಾರ್ಜುನ ಖರ್ಗೆ, ದಿವಂಗತ ಧರಮ್ ಸಿಂಗ್ ಅವರ ಶ್ರಮ ಮತ್ತು ಹೋರಾಟವಿದೆ





■ ಹಂಪಿ ಟೈಮ್ಸ್ ಯಾದಗಿರಿ

ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳ ಅಭಿವೃದ್ಧಿಗೆ ಮೂರು ವರ್ಷದಲ್ಲಿ 13000 ಕೋಟಿ ರೂಪಾಯಿ ಅನುದಾನ ನೀಡಿದ್ದೇನೆ ಎಂದು ಸಿ.ಎಂ ಸಿದ್ದರಾಮಯ್ಯ ನುಡಿದರು.

ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಆಯೋಜಿಸಿರುವ "ಆರೋಗ್ಯ ಆವಿಷ್ಕಾರ" ಯೋಜನೆಯ ಅಡಿಯಲ್ಲಿ 440.63 ಕೋಟಿ ಮೊತ್ತದ ಕಾಮಗಾರಿಗಳನ್ನು ಉದ್ಘಾಟಿಸಿ, ಬಂಜಾರ ಭವನವನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು. ವರ್ಷಕ್ಕೆ 5000 ಕೋಟಿ ಏಏಖಆಃ ಗೆ ಕೊಡುವುದಾಗಿ ನಾವು ಚುನಾವಣೆ ವೇಳೆ ಭರವಸೆ ನೀಡಿದ್ದೆವು. ಕಾಂಗ್ರೆಸ್ ಕೊಟ್ಟ ನಮ್ಮ ಭರವಸೆಯಂತೆ ಇಲ್ಲಿಯವರೆಗೂ 13000 ಕೋಟಿ ರೂಪಾಯಿ ಹಣ ನೀಡಿದ್ದೇವೆ. ಇಲ್ಲಿಯವರೆಗೂ 5300 ಕೋಟಿ ಮೊತ್ತ ಖರ್ಚಾಗಿದ್ದು ಕಾಮಗಾರಿ ಜನರಿಗೆ ತಲುಪಿದೆ ಎಂದರು.

ಏಏಖಆಃ ಗೆ ಕೊಡುವ ಈ ಅನುದಾನದ ಹೊರತಾಗಿ ಸರ್ಕಾರ ಇಲಾಖಾವಾರು ಕಾರ್ಯಕ್ರಮಗಳಿಗಾಗಿ ಅನುದಾನ ನೀಡುತ್ತಲೇ ಇದೆ ಎಂದರು.

ನಂಜುಂಡಪ್ಪ ಅವರ ವರದಿಯ ಆಶಯಗಳನ್ನು ನಮ್ಮ ಸರ್ಕಾರ ಈಡೇರಿಸುತ್ತಿದೆ. ಆರೋಗ್ಯ, ಶಿಕ್ಷಣ, ಉದ್ಯೋಗ ದಲ್ಲಿ ಕಲ್ಯಾಣ ಕರ್ನಾಟಕ ಪ್ರಗತಿ ಸಾಧಿಸುವ ಜೊತೆಗೆ ಮೂಲಭೂತ ಸೌಕರ್ಯಗಳ ಈಡೇರಿಕೆಗೆ ಹಣ ವಿನಿಯೋಗ ಮಾಡಲು ಸೂಚನೆ ನೀಡಿದ್ದೇನೆ. ಇದರ ಪ್ರಕಾರ ಅಕ್ಷರ ಆವಿಷ್ಕಾರ ನಡೆದು ಇಂದು 440.63 ಕೋಟಿ ವೆಚ್ಚದ ಆರೋಗ್ಯ ಆವಿಷ್ಕಾರ ಕಾರ್ಯಕ್ರಮ ಇಂದು ಉದ್ಘಾಟನೆ ಮಾಡಿದ್ದೇವೆ. ಕೊಲ್ಲೂರು ಮಲ್ಲಪ್ಪ ಅವರ ಸ್ಮಾರಕಕ್ಕೆ ಪುಕ್ಕಟೆಯಾಗಿ ಜಗ ಕೊಟ್ಟಿದ್ದೇವೆ. ಮಲ್ಲಪ್ಪ ಅವರು ಕಲ್ಯಾಣ ಕರ್ನಾಟಕದ ಗಾಂಧಿ ಎಂದು ಕರೆಸಿಕೊಂಡಿದ್ದವರು. ಸ್ವಾತಂತ್ರ್ಯ ಹೋರಾಟಗಾರರಾದ ಇವರ ಸ್ಮಾರಕ ಕೂಡಲೇ ಆಗಬೇಕು ಎಂದು ಸಿಎಂ ಸೂಚನೆ ನೀಡಿದರು.

42 ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುವುದು, ಹೊಸ ಆಸ್ಪತ್ರೆಗಳ ನಿರ್ಮಾಣ ಆಗುತ್ತಿದೆ. ಈ ಭಾಗದ ಆರೋಗ್ಯ ಸವಲತ್ತು ವಿಸ್ತರಿಸಲು ಒಟ್ಟು 847 ಕೋಟಿ ಕೊಡಲು ಸರ್ಕಾರ ಯೋಜನೆ ರೂಪಿಸಿದೆ. ರಾಜ್ಯದಲ್ಲಿ ಅಭಿವೃದ್ಧಿಗೆ ಹಣ ಇಲ್ಲ ಎನ್ನುವ ಬಿಜೆಪಿ ಪರಿವಾರದ ಎಲ್ಲಾ ಸುಳ್ಳುಗಳಿಗೆ ಜನರೇ ಉತ್ತರ ನೀಡುತ್ತಿದ್ದಾರೆ. ಏಕೆಂದರೆ ನಾವು ಅಭಿವೃದ್ಧಿಗೆ ಕೊಟ್ಟಿರುವ ಹಣ ರಾಜ್ಯದ ಜನರ ಮನೆ ಬಾಗಿಲಿಗೆ ತಲುಪಿದೆ ಎಂದರು.

ಬೆಲೆ ಏರಿಕೆಗೆ ಕಾರಣವಾಗಿರುವುದು ಕೇಂದ್ರದ ಮೋದಿ ನೇತೃತ್ವದ ಬಿಜೆಪಿ ಸರ್ಕಾರ. ಮೋದಿ ಬರುವ ಮೊದಲು ಚಿನ್ನ, ಪೆಟ್ರೋಲ್, ಡೀಸೆಲ್, ಔಷಧ, ರಸಗೊಬ್ಬರ, ಅಡುಗೆ ಎಣ್ಣೆ, ಅಡುಗೆ ಅನಿಲದ ಬೆಲೆ ಎಷ್ಟಿತ್ತು ? ಮೋದಿ ಬಂದ ಬಳಿಕ ಎಷ್ಟು ಏರಿಕೆಯಾಗಿದೆ ನೋಡಿ. ಬೆಲೆ ಏರಿಕೆಯ ಸೃಷ್ಟಿಕರ್ತ ಪ್ರಧಾನಿ ಮೋದಿ ಎಂದರು.

ಸುಳ್ಳೇ ಬಿಜೆಪಿಯ ಮನೆ ದೇವರು. ಬಿಜೆಪಿಗೆ ಅಧಿಕಾರ ಇದ್ದಾಗಲೂ ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಮಾಡಲಿಲ್ಲ. ಬಿಜೆಪಿ 371 ಜೆ ಗೆ ವಿರುದ್ಧವಿತ್ತು. ಉಪ ಪ್ರಧಾನಿ ಆಗಿದ್ದ ಎಲ್.ಕೆ.ಅಡ್ವಾಣಿ ಅವರು 371ಜೆ ಜಾರಿ ಮಾಡುವುದಿಲ್ಲ ಎಂದು ಪತ್ರ ಬರೆದಿದ್ದರು. ಕೊನೆಗೆ ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿ ಖರ್ಗೆ, ಧರಂಸಿಂಗ್ ಅವ್ ಹೋರಾಟಕ್ಕೆ ಮಾನ್ಯತೆ ನೀಡಿ 371ಜೆ ಜಾರಿ ಮಾಡಿದರು ಎಂದು ವಿವರಿಸಿದರು.

ನಾವು ಬಸವಣ್ಣನವರ ಆಶಯದಂತೆ ನುಡಿದಂತೆ ನಡೆಯುವರು. ನಾವು ಚುನಾವಣೆಯಲ್ಲಿ ಕೊಟ್ಟ ಭರವಸೆ ಗಳಲ್ಲಿ ಐದು ಗ್ಯಾರಂಟಿಗಳು ಸೇರಿ 200 ಭರವಸೆಗಳು ಈಡೇರಿಸಿದ್ದೇವೆ. ಮುಂದಿನ ಮೂರು ವರ್ಷಗಳಲ್ಲಿ ಉಳಿದ ಎಲ್ಲಾ ಭರವಸೆಗಳನ್ನೂ ಈಡೇರಿಸಿ ಸಮಗ್ರ ಕರ್ನಾಟಕದ ಅಭಿವೃದ್ಧಿ ಸಾಧಿಸಿ ತೋರಿಸುತ್ತೇವೆ. ಜಿಎಸ್ ಟಿ ಸಂಗ್ರಹದಲ್ಲಿ ರಾಜ್ಯ ಎರಡನೇ ಸ್ಥಾನದಲ್ಲಿರುವುದು ಆರ್ಥಿಕವಾಗಿ ರಾಜ್ಯ ಪ್ರಗತಿ ಪಥದಲ್ಲಿರುವುದಕ್ಕೆ ಸಾಕ್ಷಿ . ಕಲ್ಯಾಣ ಕರ್ನಾಟಕದ ಭಾಗದಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೂ ಕ್ರಮ ಕೈಗೊಳ್ಳಲಾಗುತ್ತಿದೆ.ಸಿಂಗ್ ಅವರು ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ ಸಂವಿಧಾನ ತಿದ್ದುಪಡಿ ಮಾಡಿ 371 ಜೆ ಜಾರಿ ಮಾಡಿದರು.ಮಲ್ಲಿಕಾರ್ಜುನ ಖರ್ಗೆ, ದಿವಂಗತ ಧರಮ್ ಸಿಂಗ್ ಅವರ ಶ್ರಮ ಮತ್ತು ಹೋರಾಟ 371ಜೆ ಜಾರಿ ಹಿಂದೆ ಕೆಲಸ ಮಾಡಿದೆ ಎಂದು ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಶ್ಲಾಘಿಸಿದರು.

## ಮೈಕ್ರೋ ನ್ಯೂಸ್

### ಜೂನ್ 16 ದಾವಣಗೆರೆಗೆ ಮುಖ್ಯಮಂತ್ರಿಗಳ ಪ್ರವಾಸ

ಹಂಪಿ ಟೈಮ್ಸ್ ದಾವಣಗೆರೆ



ರಾಜ್ಯದ ಮುಖ್ಯಮಂತ್ರಿಯವರಾದ ಶ್ರೀ ಸಿದ್ದರಾಮಯ್ಯನವರು ಜೂನ್ 16 ರ ಬೆಳಿಗ್ಗೆ 11.15ಕ್ಕೆ ಹೆಲಿಕ್ಯಾಪ್ಟರ್ ಮೂಲಕ ದಾವಣಗೆರೆ ನಗರದ ಎಂಬಿಎ ಕಾಲೇಜು ಆವರಣದ ಹೆಲಿಪ್ಯಾಡ್‌ಗೆ ಆಗಮಿಸುವರು. ನಂತರ ಶಾಮನೂರು ಶಿವಶಂಕರಪ್ಪನವರ 95ನೇ ಹುಟ್ಟು ಹಬ್ಬದ ಪ್ರಯುಕ್ತ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಆಯೋಜಿಸಿರುವ ಉಚಿತ ಮತ್ತು ಸಾಮೂಹಿಕ ವಿವಾಹ ಮಹೋತ್ಸವ ಕಾರ್ಯಕ್ರದಲ್ಲಿ ಭಾಗವಹಿಸುವರು. ಮಧ್ಯಾಹ್ನ 12 ಗಂಟೆಗೆ ಆರ್.ಎಂ.ಸಿ. ಲಿಂಕ್ ರಸ್ತೆಯಲ್ಲಿನ ಶ್ರೀ ಕಲ್ಲೇಶ್ವರ ಇಂಡಸ್ಟ್ರೀಸ್ ಆವರಣದಲ್ಲಿ ಆಧುನಿಕ ತಂತ್ರಜ್ಞಾನದ ನೂತನ ತೊಗರಿಬೇಳೆ ಹಾಗೂ ಕಡ್ಲೇಬೇಳೆ ಮಿಲ್‌ಗಳ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ 12.45 ಕ್ಕೆ ಹೈಸ್ಕೂಲ್ ಮೈದಾನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ವತಿಯಿಂದ ಆಯೋಜಿಸಲಾಗಿರುವ ದಾವಣಗೆರೆ ಜಿಲ್ಲಾ ವ್ಯಾಪ್ತಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ಹಾಗೂ ವಿವಿಧ ಯೋಜನೆಗಳಡಿ ಫಲಾನುಭವಿಗಳಿಗೆ ಸವಲತ್ತು ವಿತರಣೆ, ನಂತರ ಸಂಜೆ 4 ಗಂಟೆಗೆ ಎಂಬಿಎ ಕಾಲೇಜು ಆವರಣದಿಂದ ಹೆಲಿಕ್ಯಾಪ್ಟರ್ ಮೂಲಕ ಬೆಂಗಳೂರಿಗೆ ಪ್ರಯಾಣಿಸಲಿದ್ದಾರೆ.






# ಸ್ಕೌಟ್ಸ್ ಗೈಡ್ಸ್ ವಿದ್ಯಾರ್ಥಿಗಳಿಂದ ಸೈಕಲ್ ಜಾಥಾ

## ವಿಶ್ವ ಪರಿಸರ ದಿನಾಚರಣೆ। ಸೈಕಲ್ ಜಾಥಕ್ಕೆ ಪ್ರಭಾರ ಬಿಇಒ ಶೇಖರಪ್ಪ ಹೊರಪೇಟೆ ಚಾಲನೆ



■ ಹಂಪಿ ಟೈಮ್ಸ್ ಹೊಸಪೇಟೆ

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ, ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಸೈಕಲ್ ಜಾಥಕ್ಕೆ ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ ಶೇಖರಪ್ಪ ಹೊರಪೇಟೆ ಅವರು ಚಾಲನೆ ನೀಡಿದರು.

ನಗರದಲ್ಲಿ ಶನಿವಾರ ನಡೆದ ಕಾರ್ಯಕ್ರಮ ದಲ್ಲಿ ಮಾತನಾಡಿದ ಅವರು, ಪರಿಸರವು ನಮ್ಮ ಬದುಕಿನ ಆಧಾರ. ಶುದ್ಧ ಗಾಳಿ, ನೀರು ಮತ್ತು ಉತ್ತಮ ಪರಿಸರ ಇಲ್ಲದೆ ನಾವು ಆರೋಗ್ಯಕರ ಜೀವನ ನಡೆಸಲು ಸಾಧ್ಯವಿಲ್ಲ. ವಿದ್ಯಾರ್ಥಿಗಳು ಸೈಕಲ್ ಜಾಥಾ ಆಯೋಜಿಸಿರುವುದು ಶ್ಲಾಘನೀಯ. ಇಂತಹ ಚಟುವಟಿಕೆಗಳು ಯುವ ಪೀಳಿಗೆಯಲ್ಲಿ ಪರಿಸರ ಪ್ರಜ್ಞೆಯನ್ನು ಮೂಡಿಸಲು ಸಹಕಾರಿಯಾಗಿವೆ. ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವುದು, ಗಿಡಗಳನ್ನು ನೆಡುವುದು, ನೀರನ್ನು ಸಂರಕ್ಷಿಸುವುದು ಸೇರಿದಂತೆ ಪರಿಸರ ಸ್ನೇಹಿ ಜೀವನಶೈಲಿಯನ್ನು ಅಳವಡಿಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿ, ಮಕ್ಕಳಲ್ಲಿ ರಾಷ್ಟ್ರೀಯ ಭಾವೈಕ್ಯತೆ, ಭ್ರಾತೃತ್ವ ಭಾವನೆ ಮೂಡಿಸಲು ಇಂತಹ ಜಾಥಾಗಳು ಸಹಕಾರಿಯಾಗಲಿವೆ. ಕೋವಿಡ್ ಅಂತಹ ಸಂಕಷ್ಟ ಸಮಯದಲ್ಲೂ ಸ್ಕೌಟ್ ಮತ್ತು ಗೈಡ್ಸ್ ಸಂಸ್ಥೆಯಿಂದ ನಡೆದ ಸಾಮಾಜಿಕ ಕಾರ್ಯ ಶ್ಲಾಘನೀಯ ಎಂದು ಸ್ಮರಿಸಿದರು

ಸ್ಕೌಟ್ಸ್ ಮತ್ತು ಗೈಡ್ಸ್ ಘಟಕದ ಜಿಲ್ಲಾ ಕಾರ್ಯದರ್ಶಿ ಮಂಜುನಾಥ ಮಾತನಾಡಿ, ಪರಿಸರ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ. ಈ ನಿಟ್ಟಿನಲ್ಲಿ ನಮ್ಮ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಳ್ಳುತ್ತಿರುವುದು ಸಂತಸ ತಂದಿದೆ ಎಂದರು. ಸೈಕಲ್ ಜಾಥಾ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಪರಿಸರ ಜಾಗೃತಿ ಸಂದೇಶವನ್ನು ಸಾರಿತು. ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆಯ ಘೋಷಣೆ ಕೂಗಿದರು.

ಈ ಸಂಧರ್ಭದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷೆ ಸುಧಾದೇವಿ, ನೌಕರರ ಸಂಘದ ಜಿಲ್ಲಾ ನಿರ್ದೇಶಕ ಕಡ್ಲಿ ವೀರಭದ್ರೇಶ್ ಮತ್ತು ಬಸವರಾಜ.ಕೆ, ತಾಲ್ಲೂಕು ಕಾರ್ಯದರ್ಶಿ ತಿಪ್ಪೇಸ್ವಾಮಿ ಸೇರಿದಂತೆ ಸ್ಕೌಟ್ ಮತ್ತು ಗೈಡ್ಸ್ ಸಂಸ್ಥೆಯ ಪದಾಧಿಕಾರಿಗಳು ವಿದ್ಯಾರ್ಥಿಗಳು ಹಾಜರಿದ್ದರು.

# ಮಾವು, ಹಲಸು ಇತರೆ ಹಣ್ಣುಗಳು ಪ್ರದರ್ಶನ ಮೇಳ

■ ಹಂಪಿ ಟೈಮ್ಸ್ ದಾವಣಗೆರೆ

ಜಿಲ್ಲಾ ಪಂಚಾಯತ್, ತೋಟಗಾರಿಕೆ ಇಲಾಖೆ ಸಹಯೋಗದೊಂದಿಗೆ ಜೂನ್ 16 ರಿಂದ 18 ರವರೆಗೆ ನಗರದ ವಿನೋಬನಗರದ 1ನೇ ಮುಖ್ಯರಸ್ತೆಯಲ್ಲಿರುವ ತೋಟಗಾರಿಕೆ ಇಲಾಖೆ ಆವರಣದಲ್ಲಿ ಮಾವು, ಹಲಸು ಮತ್ತು ಇತರೆ ಹಣ್ಣುಗಳ ಪ್ರದರ್ಶನ ಹಾಗೂ ಮಾರಾಟ ಮೇಳ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಜೂನ್ 16 ರಂದು ಮಧ್ಯಾಹ್ನ 3 ಗಂಟೆಗೆ ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ ಅವರು ಮೇಳವನ್ನು ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದರು, ಶಾಸಕರು ಹಾಗೂ ವಿಧಾನ ಪರಿಷತ್ ಶಾಸಕರು ಹಾಗೂ ಸ್ಥಳೀಯ ಸಂಸ್ಥೆಯ ಎಲ್ಲಾ ಚುನಾಯಿತ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಮೇಳದಲ್ಲಿ ಒಟ್ಟು 20–25 ಮಾರಾಟ ಮಳಿಗೆಗಳಲ್ಲಿ ನೈಸರ್ಗಿಕವಾಗಿ ಮಾಗಿಸಿದಂತಹ ಸುಮಾರು 10 ಹಲುವು ಬಗೆಯ ಮಾವಿನ ಹಣ್ಣಿನ ತಳಿಗಳಾದ ಬಾದಾಮಿ, ಸಿಂದೂರ, ಕೇಸರಿ, ರಸಪುರಿ, ದಶೇರಿ, ಹಿಮಾಪಸಂದ್, ಮಲಗೋವ, ಬಂಗನಪಲ್ಲಿ ಮಲ್ಲಿಕಾ ತಳಿಗಳನ್ನು ಕೋಲಾರ, ಚಿಕ್ಕಬಳ್ಳಾಪುರ ರಾಮನಗರ ಹಾಗೂ ಧಾರವಾಡ ಜಿಲ್ಲೆಯ ರೈತರಿಂದ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆಯನ್ನು ಮಾಡಿದ್ದು ರೈತರಿಂದ ನೇರವಾಗಿ ನಾಗರೀಕರು ಖರೀದಿಸಲು ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ತೋಟಗಾರಿಕೆ ಹಿರಿಯ ನಿರ್ದೇಶಕರಾದ ರಾಘವೇಂದ್ರ ಪ್ರಸಾದ್ ತಿಳಿಸಿದ್ದಾರೆ.

# ರಕ್ತದಾನದಿಂದ ಹೊಸರಕ್ತ ಉತ್ಪತ್ತಿ, ದೇಹವು ಚೈತನ್ಯ

## ಟಿಎಚ್‌ಒ .ಡಾ. ಎಸ್.ಪಿ.ಪ್ರದೀಪ್ ಕುಮಾರ್ ಹೇಳಿಕೆ। ತಾಲೂಕು ಆರೋಗ್ಯ ಇಲಾಖೆಯಿಂದ ವಿಶ್ವ ರಕ್ತದಾನಿಗಳ ದಿನಾಚರಣೆ

■ ಹಂಪಿ ಟೈಮ್ಸ್ ಕೂಡ್ಲಿಗಿ



ರಕ್ತದಾನ ಮಾಡುವುದು ಜೀವದಾನ ಮಾಡಿದಂತೆ, ಯುವಕರು ರಕ್ತದಾನದ ಮೂಲಕ ಸಾರ್ಥಕ ಕಾರ್ಯ ಮಾಡಲು ಮುಂದಾಗಬೇಕು ಎಂದು ಟಿಎಚ್‌ಒ .ಡಾ. ಎಸ್.ಪಿ.ಪ್ರದೀಪ್ ಕುಮಾರ್ ಹೇಳಿದರು.

ಪಟ್ಟಣದ ಸಾರಿಗೆ ಬಸ್ ನಿಲ್ದಾಣದಲ್ಲಿ ಶನಿವಾರ ತಾಲೂಕು ಆರೋಗ್ಯ ಇಲಾಖೆ, ಕೆಕೆಆರ್ ಟಿಸಿ ಕೂಡ್ಲಿಗಿ ಘಟಕ, ಪ್ರಾಥಮಿಕ ಆರೋಗ್ಯ ಕೇಂದ್ರ ತಿಮ್ಮಲಾಪುರ, ಸಾರ್ವಜನಿಕ ಆಸ್ಪತ್ರೆ ಹಾಗೂ ಆರೋಹಣ ಸೊಸೈಟಿ ಫಾರ್ ಸೋಶಿಯಲ್ ಡೆವಲಪ್ಮೆಂಟ್ ಕೂಡ್ಲಿಗಿ ಮತ್ತು ಇತರೆ ಸಂಘಟನೆಗಳು ಏರ್ಪಡಿಸಿದ್ದ ವಿಶ್ವ ರಕ್ತದಾನಿಗಳ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. 18 ವರ್ಷಗಳು ಮೇಲ್ಪಟ್ಟ 60 ವರ್ಷ ಒಳಗಿನ ಆರೋಗ್ಯವಂತ ಯುವಕ, ಯುವತಿಯರು ರಕ್ತದಾನ ಮಾಡಬಹುದು. ಇದರಿಂದ ದಾನಿಗಳ ದೇಹದಲ್ಲಿ ಹೊಸ ರಕ್ತ ಉತ್ಪನ್ನವಾಗಿ ದೇಹ ಚೈತನ್ಯವಾಗಿರುತ್ತದೆ. ಹೃದಯ ರೋಗ ತಡೆಯಬಹುದು ಎಂದು ತಿಳಿಸಿದರು. ತುರ್ತು ಸಂದರ್ಭದಲ್ಲಿ ಅವಶ್ಯಕವಾಗಿರುವ ರಕ್ತ ನೀಡಿದಲ್ಲಿ, ಒಂದು ಜೀವ ಉಳಿಸಿದ ಪುಣ್ಯ ಬರುತ್ತದೆ ಎಂದು ತಿಳಿಸಿದರು.

ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ ಮಾತನಾಡಿ, ಮನುಷ್ಯನಲ್ಲಿ ಉತ್ಪತ್ತಿಯಾಗುವ ರಕ್ತವು ನೈಸರ್ಗಿಕವಾಗಿ ನಮ್ಮ ದೇಹದಲ್ಲಿ ಇದ್ದು, ಇದಕ್ಕೆ ಕೃತಕವಾಗಿ ಸೃಷ್ಟಿಸಲು ಅಸಾಧ್ಯವಾಗಿದೆ. ಅಪಘಾತ ಸೇರಿದಂತೆ ಹೆರಿಗೆ ಸಮಯದಲ್ಲಿ ರಕ್ತದ ಅವಶ್ಯಕತೆ ಹೆಚ್ಚಾಗಿರುತ್ತದೆ. ಇಂತಹ ಸಂದರ್ಭದಲ್ಲಿ ರಕ್ತದಾನ ಮಾಡುವ ಮೂಲಕ ಅಮೂಲ್ಯ ಜೀವಗಳನ್ನು ಉಳಿಸುವ ಸಾರ್ಥಕ ಕಾರ್ಯ ನಮಗೆ ಸಿಗುತ್ತದೆ. ಇತ್ತೀಚಿನ ಯುವಕ, ಯುವತಿಯರು ವೈದ್ಯರ ಸಲಹೆ ಮೇರೆಗೆ ರಕ್ತದಾನ ಮಾಡುವ ಮೂಲಕ ಸಾಮಾಜಿಕ ಬದ್ಧತೆ ಮೆರೆಯಬೇಕು. ಉತ್ತಮ ಆರೋಗ ಕೂಡ ನಮಗೆ ಸಿಗುತ್ತದೆ ಎಂದು ತಿಳಿಸಿದರು.

ಇದೇ ಸಂಧರ್ಭದಲ್ಲಿ ಸುಮಾರು 250 ಕ್ಕೂ ಹೆಚ್ಚು ಯೂನಿಟ್ ರಕ್ತ ದಾನಿಗಳ ಮೂಲಕ ಸಂಗ್ರಹಿಸಲಾಯಿತು. ವಿಶ್ವ ರಕ್ತದಾನಿಗಳ ದಿನಾಚರಣೆ ಅಂಗವಾಗಿ ತಾಲೂಕಿನ ಹಿರೆಹೆಗ್ಡಾಳ್, ಶಿವಪುರ, ಗಜಾಪುರ, ಕಂದಗಲ್ಲು ಹಾಗೂ ವೈಎಸ್‌ಎಸ್ ಸಮೂಹ ವಿದ್ಯಾ ಸಂಸ್ಥೆಯಲ್ಲಿ ಏರ್ಪಡಿಸಲಾಗಿತ್ತು.

ಪಪಂ ಸ್ಥಾಯಿ ಸಮಿತಿ ಅಧ್ಯಕ್ಷ ಸಯ್ಯದ್ ಶುಕೂರ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಜಗದೀಶ್ ನಾಯ್ಕ್, ಸಾರಿಗೆ ವ್ಯವಸ್ಥಾಪಕ ಮಂಜುನಾಥ ಹೊನ್ನಳ್ಳಿ, ಪಪಂ ಸದಸ್ಯ ಸಚಿನ್ ಕುಮಾರ್, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿಗಳಾದ ಕೆ.ಸುನೀತಾ, ಪಿ.ಬಿ.ಗಿರಿಜಾ, ಭವ್ಯ, ಐಸಿಟಿಸಿ ಆಪ್ತ ಸಮಾಲೋಚಕರಾದ ಮರುಳಾರಾಧ್ಯ, ಮಹಾಂತೇಶ್, ಕೆ.ಪ್ರಶಾಂತ ಕುಮಾರ್, ಆರ್ ಕೆಎಸ್ ಕೆ ಆಪ್ತ ಸಮಾಲೋಚಕ ಓಬಣ್ಣ, ನಾಗರಾಜ, ಬೋರಣ್ಣ,ಸೋಮಶೇಖರ್, ಸುನೀಲ್ ಸಾಥಿಹಾಳ್, ಸತೀಶ್ ಸೇರಿದಂತೆ ಆಶಾ ಕಾರ್ಯಕರ್ತೆಯರು ಇದ್ದರು.

# ಮಳೆ ಬಂದಿಲ್ಲ, ರಸ್ತೆಗೆ ನೀರು? ಸಂಚಾರ ಸಂಕಷ್ಟ



■ ಹಂಪಿ ಟೈಮ್ಸ್ ಹೊಸಪೇಟೆ

ನಗರದ ಮೂರಂಗಡಿ ಸರ್ಕಲ್‌ನಿಂದ ಬಸ್ ನಿಲ್ದಾಣಕ್ಕೆ ತೆರಳುವ ಮುಖ್ಯ ರಸ್ತೆಯಲ್ಲಿ ಕಾಲುವೆಯ ನೀರು ಉಕ್ಕಿ ಹರಿಯುತ್ತಿದ್ದರೂ ಸಂಬಂಧಿಸಿದ ಅಧಿಕಾರಿಗಳು ಇತ್ತಕಡೆ ಗಮನಹರಿಸದಿರುವುದಕ್ಕೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಸುಗಮ ಸಂಚಾರಕ್ಕೆ ತೀವ್ರ ಅಡ್ಡಿಯಾಗಿರುವ ನೀರನ್ನು ತಡೆಯುವವರು ಯಾರು? ಯಾರಿಗೆ ದೂರಬೇಕು, ಅಧಿಕಾರಿಗಳು ಇದ್ದಾರೋ ಇಲ್ಲವೋ ಎಂದು ಸವಾರರು ನಿರ್ವಹಣೆ ಮರೆತವರ ವಿರುದ್ಧ ಶಪಿಸುತ್ತಾ ಸಾಗಿದರು. ಮಳೆ ಬಂದಾಗ ಒಂದತರ ತೊಂದರೆಯಾದರೆ, ಮಳೆ ಬರದಿದ್ದರೂ ಆಡಳಿತ ವ್ಯವಸ್ಥೆಯ ನಿರ್ಲಕ್ಷ್ಯದಿಂದ ಇನ್ನೊಂದು ಬಗೆಯ ಸಮಸ್ಯೆಗೆ ಜನರು ಸಿಲುಕಬೇಕಾಗಿದೆ. ಕೂಡಲೇ ಸಂಬಂಧಿಸಿದರು ಗಮನ ಹರಿಸಲಿ ಎಂದು ವಾಹನ ಸವಾರರು ಒತ್ತಾಯಿಸಿದ್ದಾರೆ.

## ಬೆಳಕಿನ ಹಾದಿ

# ಅಯ್ಯೋ ಇದನ್ಯಾವ ಮಾಡ್ತಾನ?

ಮನುಷ್ಯ ಜನ್ಮ ತಾಳಿದ ನಂತರ, ಮನುಷ್ಯನಾಗಿ ಬದುಕುವುದು ಮುಖ್ಯ. ಬದುಕಲು ಊಟ, ವಸತಿ, ಬಟ್ಟೆ ಅನಿವಾರ್ಯ. ಅದಕ್ಕೆಲ್ಲ ಹಣ ಬೇಕು. ಹಣ ಬೇಕೆಂದರೆ ದುಡಿತ ಬೇಕು. ಸರಿ. ಇದೆಲ್ಲ ಅನುಸರಿಸಿದಾಗ ಹಣ, ಸಂಪತ್ತಿನ ಗಳಿಕೆಯಾಗುತ್ತದೆ. ಅಲ್ಲಿಂದಲೇ ಸಮತೋಲನ ಜೀವನ ಕ್ರಮದ ಪರೀಕ್ಷೆ ಆರಂಭವಾಗುತ್ತದೆ.



ಈ ಸಂಪತ್ತಿನ ಗಳಿಕೆ ಮತ್ತು ವಿನಿಯೋಗ ಹೇಗಿರಬೇಕು? ಗಳಿಕೆ ಪ್ರಾಮಾಣಿಕವಾಗಿಯೂ ಮತ್ತು ಅದರ ವಿನಿಯೋಗ ನಿಸ್ವಾರ್ಥದಿಂದ ಕೂಡಿದ್ದರೆ ಜೀವನದಲ್ಲಿ ಅಪೇಕ್ಷಿತ ತೃಪ್ತಿ ಹೊಂದಬಹುದು.

ಬದಲಾಗಿ ಅಪ್ರಮಾಣಿಕ ಸಂಪತ್ತಿನ ಗಳಿಕೆ ಕ್ಷಣ ಕ್ಷಣಕ್ಕೂ ಚಿಂತಿತರನ್ನಾಗಿಸುತ್ತ ಗೊತ್ತಿಲ್ಲದಂತೆ ಅನ್ಯಾಯದ ದಾರಿ ಹಿಡಿಸುತ್ತದೆ. ಪ್ರತಿಷ್ಠೆ, ದುರಾಸೆ, ಸ್ವಾರ್ಥ, ಆವರಿಕೊಂಡು ಮನಸ್ಸಿನ ನೆಮ್ಮದಿಗೆ ದುಶ್ಚಟಗಳ ನಂಟು ಅಂಟಿಕೊಳ್ಳುತ್ತವೆ. ಇದೆಲ್ಲದಕ್ಕೂ ಮನುಷ್ಯ ಹಣ ಖರ್ಚು ಮಾಡುತ್ತಲೇ ಇರುತ್ತಾನೆ. ಕೊನೆಗೆ ಆರೋಗ್ಯ ಹದಗೆಟ್ಟು ಪಾಪ ಪುಣ್ಯಗಳ ಪರಿಜ್ಞಾನಕ್ಕೆ ಹೋಗುತ್ತಾನೆ. ಇಂತಹ ಸ್ಥಿತಿಯಲ್ಲಿ ಅದೆಷ್ಟು ಹಣ ಖರ್ಚು ಮಾಡಿದರೂ ನರಕಯಾತನೆ ಮನಶಾಂತಿ ದೊರೆಯುವುದು ಕಷ್ಟ ಸಾಧ್ಯ.

ಏನೂ ಹಣ ಖರ್ಚು ಮಾಡದೇ ನೆಮ್ಮದಿಯಿಂದ ಬದುಕಲು ಸಾಧ್ಯವಿಲ್ಲವೆ? ಖಂಡಿತಾ ಸಾಧ್ಯವಿದೆ. ಸ್ವಂತ ದುಡಿದು ಗಳಿಸಿದ ಪ್ರಮಾಣಿಕ ಸಂಪತ್ತಿನ ತೃಪ್ತಿ ಇರಬೇಕು. ನಿಸ್ವಾರ್ಥದ ವಿನಿಯೋಗ ಇರಬೇಕು. ಜತೆಗೆ ದೈವತ್ವದ ಮನಸ್ಸು ಇರಬೇಕು. ಅಧ್ಯಾತ್ಮಿಕ ಒಲವು ರೂಢಿಸಿಕೊಳ್ಳಬೇಕು. ಇವಾವುದಕ್ಕೂ ಹಣ ಬೇಕಾಗಿಲ್ಲ. ನಂಬಿಕೆಯ ದೃಡ ಮನಸ್ಸು ಬೇಕು.

ಪೂಜೆ ಮಾಡಲು, ದೇವಸ್ಥಾಕ್ಕೆ ಹೋಗಲು, ಅಧ್ಯತ್ಮಿಕ ಅಭ್ಯಸಿಸಲು, ಸತ್ಸಂಗಕ್ಕೆ ಹೋಗಲು, ಧ್ಯಾನ ಮಾಡಲು, ಯಾರಿಗಾದರೂ ಸನ್ಮರ್ಗದ ದಾರಿ ತೋರಲು, ನೈತಿಕ ಮನೋಬಲ ತುಂಬಲು, ಇತರರಿಗೆ ಪ್ರೀತಿ ವಿಶ್ವಾಸ ತೋರಲು ಯಾವುದಕ್ಕೂ ಹಣ ಖರ್ಚು ಮಾಡಬೇಕಾಗಿಲ್ಲ. ತಮ್ಮ ತಮ್ಮ ಹಿರಿಯರು ಅಥವಾ ಗುರುಗಳ ಸಾನಿದ್ಯದಿಂದ ಉಚಿತವಾಗಿ ಪಡೆಯಬಹುದು. ಆದರೆ ಆರಂಭಿಕ ಹಂತದಲ್ಲಿ "ಸತ್ಸಂಗ, ಅಧ್ಯಾತ್ಮ, ಪೂಜೆ..... ಅಯ್ಯೋ ಇದನ್ಯಾವ ಮಾಡ್ತಾನ?" ಎಂದು ತಾತ್ಸಾರ ಭಾವನೆ ಬರಬಹುದು. ಆ ಭಾವನೆಯನ್ನು ಮೆಟ್ಟಿ ಸಕಾರತ್ಮಕ ಚಿಂತನೆಯೊಂದಿಗೆ ಒಮ್ಮೆ ಗಟ್ಟಿಯಾಗಿ ಆರಂಬಿಸಿದರೆ, ಮುಂದೆ ನಿಮ್ಮಲ್ಲಿಯ ನಕಾರಾತ್ಮಕ ಶಕ್ತಿ ಕುಂದುತ್ತ ಹೋಗುತ್ತದೆ. ನಿಮ್ಮಲ್ಲಿಯೇ ಆಂತರಿಕ ಹೊಸ ಚೈತನ್ಯ ಆವರಿಸಿದಂತೆ ಅನುಭವ ಆಗುತ್ತದೆ. ಆ ಅನುಭವ ನಿಮಗೆ ಮಾನಸೀಕ ನೆಮ್ಮದಿ ತರುತ್ತದೆ. ಅನುಭವವು ಅನುಭಾವ ವಾಗಿ ಪರಿವರ್ತನೆಯಾಗಿ ಸಂಸಾರದಲ್ಲಿದ್ದುಕೊಂಡೆ ಪಾರ ಮಾರ್ಥಿಕ ಅನುಭವ ಪಡೆದು ಸಂಕಟವಿಲ್ಲದ ಬದುಕಿನ ಪ್ರಯಾಣ ಮುಗಿಸಲು ಸಹಾಯವಾಗುತ್ತದೆ. ಲೌಕಿಕ ಜೀವನದಲ್ಲಿ ಪಾರಮಾರ್ಥಿಕ ಅಳವಡಿಸಿಕೊಂಡರೆ ಬದುಕು ಸಾರ್ಥಕ.

– ಲಕುಮಿಸುತ ಸಾರವಾಡ

**ಸ್ಥಳೀಯ ಸಮಗ್ರ ಸುದ್ದಿಗಳಿಗಾಗಿ**
ಹಂಪಿ ಟೈಮ್ಸ್ ದಿನಪತ್ರಿಕೆಯ ಚಂದದಾರರಾಗಿರಿ
ಹೊಸಪೇಟೆ, ಹಗರಿಬೊಮ್ಮನಹಳ್ಳಿ, ಹಡಗಲಿ,
ಹರಪನಹಳ್ಳಿ, ಕೊಟ್ಟೂರು ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ
ನಿಮ್ಮ ಸಮೀಪದ ಪತ್ರಿಕಾ ಏಜೆಂಟರನ್ನು
ಕೇಳಿ ಪಡೆಯಿರಿ

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.


**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 94486 33038

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

ಪ್ರೊ.ಎ.ಎನ್. ಮೂರ್ತಿರಾವ್ ಅವರ 125ನೇ ಜನ್ಮ ದಿನದ (ಜೂ.16) ಪ್ರಯುಕ್ತ ಲೇಖನ

# ವೈಚಾರಿಕತೆಯ ಮೂಸೆಯೊಳಗೆ ನಂಬಿಕೆಗಳ ಆಭರಣ






ಪ್ರೊ. ಎ. ಎನ್. ಮೂರ್ತಿರಾಯರುಕನ್ನಡದ ಹೆಸರಾಂತ ಹಿರಿಯ ವಿದ್ವಾಂಸರು, ಶ್ರೇಷ್ಠ ಪ್ರಬಂಧಕಾರರು ವಿಮರ್ಶಕರು ಹಾಗೂ ಅನುವಾದಕರು. ಬದುಕಿನ ನೋವು–ನಲಿವು, ಸುಖ–ದುಃಖಗಳ ಸಮನ್ವಯತೆಯ ಸಮಾನಮನಸ್ಕರಾದ, ಹೃದಯ ಶ್ರೀಮಂತಿಕೆಯುಳ್ಳ ಮಾನವೀಯ ಮೌಲ್ಯಗಳ ಮಹಾಸಂಗಮ. ಮೂರ್ತಿರಾಯವರು ಬದುಕಿನದ್ದಕ್ಕೂ ಸರಳ ವ್ಯಕ್ತಿತ್ವವನ್ನು ರೂಢಿಸಿಕೊಂಡ ಜೀವನದ ಪರಿಪೂರ್ಣತೆಯ ಪ್ರತಿಬಿಂಬವಾಗಿದ್ದಾರೆ.

ಶತಾಯುಷಿಗಳಾದ ಅವರು ಹುಟ್ಟಿದ್ದು ನೂರ ಇಪ್ಪತ್ತೈದು ವರ್ಷಗಳ ಹಿಂದೆ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲೂಕಿನ ಅಕ್ಕಿಹೆಬ್ಬಾಳು ಎಂಬ ಸಣ್ಣ ಗ್ರಾಮದಲ್ಲಿ 16 ಜೂನ್ 1900ರಲ್ಲಿ.ತಂದೆ ಸುಬ್ಬರಾಯ ಹಾಗೂ ತಾಯಿವೆಂಕಟಲಕ್ಷ್ಮಮ್ಮ .ಬಾಲ್ಯದ ದಿನಗಳನ್ನು ಮೇಲುಕೋಟೆ, ನಾಗಮಂಗಲಗಳಲ್ಲಿ ಕಳೆದರು. 1913ರಲ್ಲಿ ಮೈಸೂರಿನ ವೆಸ್ಲಿಯನ್ ಮಿಷನ್ ಸ್ಕೂಲ್ನಲ್ಲಿ ಶಾಲಾ ಶಿಕ್ಷಣ ಪೂರೈಸಿ, ಮೈಸೂರು ಮಹಾರಾಜ ಕಾಲೇಜನ್ನು ಸೇರಿದರು. 1922ರಲ್ಲಿ ಬಿ.ಎ. ಪದವಿಯನ್ನೂ, 1924ರಲ್ಲಿ ಎಂ.ಎ.ಪದವಿ ಪಡೆದರು. ನಂತರ ಮೈಸೂರು ವಿಶ್ವವಿದ್ಯಾನಿಲಯದಲ್ಲಿಇಂಗ್ಲಿಷ್ ಪ್ರಾಧ್ಯಾಪಕರಾಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು. ಕುಮಾರವ್ಯಾಸನ 'ಕರ್ಣಾಟ ಭಾರತಕಥಾಮಂಜರಿ'ಯಜನಪ್ರಿಯ ಆವೃತ್ತಿ ಆಗಿನ ಮೈಸೂರು ಸರ್ಕಾರದಿಂದ ಪ್ರಕಟಗೊಂಡದ್ದು ಈ ಅವಧಿಯಲ್ಲಿಯೇ.

ಆಧುನಿಕ ಕನ್ನಡದ ಸಾಹಿತ್ಯದ ಸಂದರ್ಭದಲ್ಲಿ ಗದ್ಯ ಬರಹಗಾರರಾದ ಮೂರ್ತಿರಾಯರು ಕನ್ನಡದ ಶ್ರೇಷ್ಠ ಪ್ರಬಂಧಕಾರರಾಗಿಯೇ ಗುರುತಿಸಿಕೊಂಡಿದ್ದಾರೆ. ಹಗಲುಗನಸುಗಳು (1937), ಅಲೆಯುವ ಮನ (1959), ಮಿನುಗು–ಮಿಂಚು (1962) – ಇವು ಲಲಿತ ಪ್ರಬಧಗಳು. "ಮೃದುವಾದ ಹಾಸ್ಯ, ಲಘುವಾದಚಿಂತನೆ, ಮನವನ್ನು ಉಲ್ಲಾಸಗೊಳಿಸುವಂತಹ ವಿಚಾರ–ಇವು ಇವರ ಲಲಿತ ಪ್ರಬಂಧಗಳ ಪ್ರಧಾನ ಲಕ್ಷಣಗಳು." ಅಪರ ವಯಸ್ಕನ ಅಮೆರಿಕಾ ಯಾತ್ರೆ ಪ್ರವಾಸ ಸಾಹಿತ್ಯಕ್ಕೆ ಅಪೂರ್ವ ಕೊಡುಗೆ. ಪೂರ್ವಸೂರಿಗಳೊಡನೆ (1981), ಶೇಕ್ಸ್‌ಪಿಯರ್‌ನ 'ಟೆಂಪೆಸ್ಟ್' ನಾಟಕದ ಅನುವಾದ 'ಚಂಡಮಾರುತ' (1981), ಮೊದಲಾದವು ಶ್ರೀಯುತರ ಕೃತಿಗಳು. ಫ್ರೆಂಚ್ ನಾಟಕಕಾರ ಮೋಲಿಯೇರ್ ತಾರ್ತುಫ್ ನಾಟಕಾಧಾರಿತ ಆಷಾಢಭೂತಿ (1931) ಇವರ ಮೊದಲ ಕೃತಿ.ಶಿವರಾಮ ಕಾರಂತರ' ಮರಳಿ ಮಣ್ಣಿಗೆ' ಕಾದಂಬರಿಯನ್ನು 'ದಿ ರಿಟರ್ನ್‌ಟು ದಿ ಸಾಯಿಲ್' ಎಂದು ಇಂಗ್ಲಿಶ್‌ಗೆ ಅನುವಾದಿಸಿದ್ದಾರೆ. ಬಿ.ಎಂ.ಶ್ರೀಕಂಠಯ್ಯನವರನ್ನು ಕುರಿತು ಇಂಗ್ಲಿಶ್‌ನಲ್ಲಿ ಬರೆದಿದ್ದಾರೆ. 1978ರಲ್ಲಿ ಬಂದ'ಚಿತ್ರಗಳು ಪತ್ರಗಳು'ಕೃತಿಗೆ 1979ರಲ್ಲಿ ಕೇಂದ್ರ ಸಾಹಿತ್ಯಅಕಾಡೆಮಿ ಪ್ರಶಸ್ತಿ ಲಭಿಸಿತು.ತಾವು ಕಂಡ ಅನೇಕ ಮೇರುವ್ಯಕ್ತಿಗಳ ಜೀವನದ ನೆಳಲು–ಬೆಳಕುಗಳ ಸೊಗಸಾದ ಚಿತ್ರಣವೇ ಈ ಕೃತಿ. 'ದೇವರು'ಜಗತ್ತಿನಲ್ಲಿ ದೇವರಿಲ್ಲ ಎಂಬುದನ್ನು ಅತ್ಯಂತ ಸ್ವಾರಸ್ಯಕರವಾಗಿ ನಿರೂಪಿಸಿರುವ ಈ ಕೃತಿಗೆ 1992ರಲ್ಲಿ ಕರ್ನಾಟಕ ಸರ್ಕಾರದ ಪಂಪ ಪ್ರಶಸ್ತಿ ಸಂದಿರುವುದು ಗಮನಾರ್ಹ. ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಿ.ಲಿಟ್.ಪದವಿ ನೀಡಿ ಗೌರವಿಸಿದೆ. 1984ರಲ್ಲಿ ಕೈವಾರದಲ್ಲಿ ನಡೆದ 56ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.



ಶಾಲಿನಿ ಎಂ
ಶಿಕ್ಷಕಿ, ಚಿತ್ರದುರ್ಗ

Scan For Digital Colourful
HAMPI TIMES E-paper

**ದೇವರೆಂಬ ಕಲ್ಪನೆ–ವಾಸ್ತವ:** ಶತಶತಮಾನಗಳ ಹಿಂದೆ ಮಾನವನಲ್ಲಿ ಸೌಂದರ್ಯ ಪ್ರಜ್ಞೆ ಅರಳಿ ಅವನು ತನ್ನ ಸುತ್ತಮುತ್ತಲ ಪ್ರಪಂಚವನ್ನು ಕುತೂಹಲದಿಂದ ನೋಡ ತೊಡಗಿದಾಗ ಅವನಿಗೆ ಕಂಡಂದ್ದೇನು? ಅಗ್ನಿ ಪರ್ವತಗಳಿಂದ ಭುಗಿಲೆದ್ದು ಗಗನಕ್ಕೆರಿದ ಜ್ವಾಲೆ, ಲಾವಾರಸ, ಕಣ್ಣುಕೋರೈಸುವ ಮಿಂಚು, ಸಮುದ್ರತೀರದಲ್ಲಿ ಮೇಲೆ ಅಪ್ಪಳಿಸುವ ಅಲೆಗಳು. ಇವುಗಳ ಜೊತೆಗುಡುಗಿನ ಆರ್ಭಟ, ಸಿಡಿಲಿನ ಹೊಡೆತ! ಈ ಭಯಂಕರ ಪ್ರಪಂಚದಲ್ಲಿ ನಾನು ಹೇಗೆ ತಾನೇ ಬದುಕಿಯೇನು?ಎಂದು ಮನುಷ್ಯ ತಲ್ಲಣಿಸಿರಬೇಕು.

ಹೀಗೆ ಪ್ರಕೃತಿಯ ರೋಷವನ್ನು, ಅದರ ಮಾರಕ ಪರಿಣಾಮಗಳನ್ನು ನೋಡಿದ ಮಾನವನೇ ಮತ್ತೊಂದು ಮುಖವನ್ನೂ ನೋಡಿದ. ಅದೇನೆಂದರೆ: ಸೂರ್ಯೋದಯ, ಸೂರ್ಯಾಸ್ತಗಳ ಬಣ್ಣದ ಸಿರಿ! ಕಾಮನಬಿಲ್ಲಿನ ಸೊಬಗು, ಮಳೆಯಿಂದ ತೊಯ್ದಕಾಡಿನಲ್ಲೂ, ಬಯಲಿನಲ್ಲೂ, ಹಸುರಿನ ಹಬ್ಬ! ಗಾಳಿಯಲ್ಲಿ ನಲಿದಾಡುವ ಹೂವುಗಳ ಕೋಮಲತೆ ಸುಗಂಧ! ರಾತ್ರಿ ಆಕಾಶದಲ್ಲಿ ಮಿನುಗುವ ನಕ್ಷತ್ರಗಳು! ಜಗತ್ತಿಗೆಲ್ಲ ಸೌಮ್ಯ ಸೌಂದರ್ಯವನ್ನು ಕೊಟ್ಟು ತಂಪೆರೆಯುವ ಬೆಳದಿಂಗಳು! ಸಮುದ್ರದ ಪಾರವಿಲ್ಲದ ಹರಹು! ಗಾಂಭೀರ್ಯ. ಮೊದಲು ಕ್ರೂರವಾಗಿದ್ದ ಪ್ರಕೃತಿಯೇ ಈಗ ಪ್ರಸನ್ನವಾಗಿದೆ! ಇದನ್ನೆಲ್ಲಾ ಕಂಡ ಮನುಷ್ಯನಿಗೆ ಆಶ್ಚರ್ಯ, ಕೌತುಕ, ಸಂತೋಷ. ಅದೊಂದು ಬಗೆಯ ಬಣ್ಣಿಸಲಾಗದ ಮೂಕ ಅನುಭವ. ಅದನ್ನು ಅವನು ಬಣ್ಣಿಸಲಾರ, ವಿಶ್ಲೇಷಿಸಲಾರ. ಈ ರುದ್ರ ಸುಂದರ ಭೀಷಣ ಪ್ರಸನ್ನ ಪ್ರಪಂಚದ ವ್ಯಾಪಾರ ಅವನಿಗೆ ಅದೊಂದು ಒಗಟು. ಬಹುಶಃ ಇವೆಲ್ಲದರ ಹಿಂದೆ ಒಂದು ಅದ್ಭುತ ಶಕ್ತಿ ಇದೆ. ಅದೇ 'ದೇವರು' ಎಂಬ ಕಲ್ಪನೆ. ಈ ಕಲ್ಪನೆಯ ಹಿಂದೆ ಭಯ,ಆಶ್ಚರ್ಯ, ರಕ್ಷಣೆಯನ್ನು ಬೇಡುವ ಮನಸ್ಥಿತಿ.ಅಯ್ಯೋದೇವರನ್ನುಎದುರು ಹಾಕಿಕೊಂಡರೆ, ಅವನು ವಿಪತ್ತುತಂದೊಡ್ಡುತ್ತಾನೆ ಎಂಬ ಭಯ ದಿಂದಲೂ ಪ್ರಪಂಚದ ಕಷ್ಟಕೂಟದಿಂದ ನಮ್ಮನ್ನು ಪಾರು ಮಾಡಿ ನಾನು ಎನ್ನುವ ನಿರೀಕ್ಷೆಯಿಂದಲೂ, ಉನ್ನತ ಮೌಲ್ಯಗಳ ಸಂಕೇತ ಎನ್ನುವ ಭಾವನೆಯಿಂದಲೂ, ಹಾಗೆ ಒಂದಲ್ಲ ಒಂದು ಕಾರಣದಿಂದಾಗಿ ಈ 'ದೇವರು' ಎಂಬ ಕಲ್ಪನೆ ನಮ್ಮ ಮನಸ್ಸಿನಲ್ಲಿ ಸುಳಿದಾಡುತ್ತಲೇ ಇರುತ್ತದೆ.

ಗಣಪತಿಯ ಬಗ್ಗೆ ಇರುವ ಕಥೆಯನ್ನು ಕೇಳಿದರೆ ನಮಗೆ ಹತ್ತಾರು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಪಾರ್ವತಿಗೆ ಹೊಟ್ಟು, ಮಣ್ಣು ಮುಂತಾದ ಸಾಮಗ್ರಿಗಳೇ ಸಿಗಲಿಲ್ಲವೇ? ಆಕೆಯ ಮೈಮೇಲೆ ಪುಟ್ಟ ಹುಡುಗನನ್ನು ಮಾಡುವಷ್ಟು ಕೊಳೆಯಿತ್ತೋ? ಅವಳ ಸ್ನಾನದ ಮನೆಯ ಬಾಗಿಲಿಗೆ ಅಗಳಿಗಳೇನು ಇರಲಿಲ್ಲವೇ? ಶಿವನಾದರೂ ದಾದು ಫಿರ್ಯಾದು ಏನು ಯೋಚಿಸದೆ ಆ ಚಿಕ್ಕ ಹುಡುಗನನ್ನು ಕೊಲ್ಲುವಷ್ಟು ಕ್ರೂರಿಯೇ? ಮತ್ತೆ ಆ ಹುಡುಗನನ್ನು ಬದುಕಿಸಲು ಬೇಕಾದತಲೆ ಆ ಹುಡುಗನದೇ ತಲೆ ಹತ್ತಿರದಲ್ಲೇ ಬಿದ್ದಿತ್ತಲ್ಲ? ಅದನ್ನು ಬಿಟ್ಟು ಬೇರೆ ತಲೆಯನ್ನೇಕೆ ತರಿಸಬೇಕಾಗಿತ್ತು? ಉತ್ತರ ದಿಕ್ಕಿಗೆ ತಲೆ ಮಾಡಿ ಮಲಗಿದ ಯಾರೇ ಆಗಲಿ ನಿಷ್ಕಾರಣವಾಗಿ ಅವರನ್ನು ಕೊಲ್ಲುವುದು ಅನ್ಯಾಯವಲ್ಲವೇ? ಅವರು ಮಾಡಿದ ಅಪರಾಧವಾದರೂ ಏನು? ಹೀಗೆ ಹತ್ತು ಹಲವಾರು ಪ್ರಶ್ನೆಗಳು ಮೂಡುತ್ತವೆ. ಆದರೆ ಇಂಥ ಪ್ರಶ್ನೆಗಳನ್ನು ಕೇಳಬಾರದು. ನದಿಮೂಲ, ಋಷಿಮೂಲಗಳನ್ನು ಬೆದಕಿಗೊಂಡು ಹೋಗಬಾರದು. ಅಂದ ಮೇಲೆ ದೇವರ ಮೂಲವನ್ನು ಬೆದಕುವವನಿಗೆ ಕ್ಷಮೆ ಉಂಟೆ? ಈ ಒಂದು ಕಥೆಯನ್ನು ನಂಬಲು ಸಾಧ್ಯವಿಲ್ಲ. ನಂಬಿಕೆಗೆ ಅರ್ಹವಿಲ್ಲ, ಎಂದು ಆಕ್ಷೇಪಿಸಿ ತಲೆಕೆಡಿಸಿಕೊಳ್ಳುವ ಬದಲು ನಮ್ಮ ಜನತೆಯ ಕಲ್ಪನಾ ಶಕ್ತಿ ಇಂಥದೊಂದು ದೇವರನ್ನು ನಮಗೆ ಒದಗಿಸಿ ಕೊಟ್ಟಿತಲ್ಲ! ಎಂದು ಕೃತಜ್ಞರಾಗಿರೋಣ. ಶತಾಯುಷಿಗಳಾಗಿ ತುಂಬು ಜೀವನ ನಡೆಸಿದ ಮೂರ್ತಿರಾಯರು 23 ಆಗಸ್ಟ್ 2001ರಂದು ವಿಧಿವಶರಾದರು. ಇದು ಕನ್ನಡ ಸಾರಸ್ವತಲೋಕಕ್ಕೆ ಆದ ತುಂಬಲಾರದ ನಷ್ಟವಾಗಿದೆ.

ನಾವು ಅದೆಷ್ಟು ವೈಜ್ಞಾನಿಕವಾಗಿ ಮುಂದುವರೆದರೂ, 'ದೇವರು' ಎನ್ನುವಕಲ್ಪನೆ ಹಾಗೂ ನಂಬಿಕೆಯಲ್ಲಿಯಾವ ಬದಲಾವಣೆಯೂ ಆಗಲಾರದು. 'ನಂಬಿಕೆಯೇಜೀವನ' ಎನ್ನುವತತ್ವವನ್ನು ಪರಿಪಾಲಿಸುತ್ತಿದ್ದೇವೆ. ಯಾವೊಂದು ಕೆಲಸವನ್ನು ಮಾಡುವಾಗಲೂ ಮೊದಲು ವಿಘ್ನೇಶ್ವರನ ಮೊರೆ ಹೋಗುತ್ತೇವೆ. ವಿಜ್ಞಾನಿಗಳು ಕೂಡ ಇದರಿಂದ ಹೊರತಾಗಿಲ್ಲ. ಚಿಕ್ಕ ಮಕ್ಕಳು ತಪ್ಪು ಮಾಡಿದಾಗ, ಸುಳ್ಳು ಹೇಳಿದಾಗ, 'ದೇವರುಕಣ್ಣು ಕೀಳುತ್ತಾನೆ, ಮೂಕನಾಗುತ್ತೀಯಾ' ಎಂದು ಹಿರಿಯರು ಚಿಕ್ಕವರಿದ್ದಾಗಲೇ ಮಕ್ಕಳಲ್ಲಿ ದೇವರ ಬಗ್ಗೆ ನಂಬಿಕೆ, ಭಯ ಹುಟ್ಟುವಂತೆ ಮಾಡುತ್ತಾರೆ. ಇದೊಂದು ರೀತಿಯಲ್ಲಿ ಒಳ್ಳೆಯದೇ. ಸರಿಯಾದ ದಾರಿಯಲ್ಲಿ ನಡೆಯುವಂತೆ ಪಾಪ–ಪುಣ್ಯಗಳ ಕಲ್ಪನೆಯನ್ನು ಬೆಳೆಸಿಕೊಳ್ಳಲು ಇದೊಂದು ಒಳ್ಳೆಯ ಮಾರ್ಗ. 'ದೇವರು' ಒಂದು ಅಮೂರ್ತ ಸ್ವರೂಪದ ಕಲ್ಪನೆ. ಅದಕ್ಕೆ ನಾವು ಮೂರ್ತರೂಪ ಕೊಟ್ಟು ಅದ್ಭುತ ಶಕ್ತಿ, ಸ್ವರೂಪವನ್ನು ಭೂಮಿಗಿಳಿಯುವಂತೆ ಸೃಷ್ಟಿಸಿದ್ದೇವೆ. "ಇವನು ದೇವರನ್ನು ನಂಬದಿದ್ದರೆ ಬಿಡಲಿ, ತನ್ನ ಅಪನಂಬಿಕೆಯನ್ನು ಊರಿಗೆಲ್ಲ ಹಂಚಬೇಕೇ?" ಎಂಬ ಟೀಕೆಯನ್ನು ಮೂರ್ತಿರಾಯರು ಕೇಳಿದ್ದಾರೆ. ಆದರೆ ದೇವರಲ್ಲಿ ನಂಬಿಕೆಯನ್ನು ವ್ಯಕ್ತಪಡಿಸುವ, ಅವನ ಮಹಿಮೆಯನ್ನು ಹೊಗಳುವ, ಭಾಷಣ, ಲೇಖನಗಳು ಸರ್ವಸಾಮಾನ್ಯವಾದ್ದರಿಂದ ಅವು ನ್ಯೂಸ್(ವಿಶೇಷ ಸಮಾಚಾರ) ಆಗುವುದಿಲ್ಲ. ನಂಬಿಕೆಯಿಲ್ಲ ಎನ್ನುವುದು ನ್ಯೂಸ್ ಆಗಿ ಪ್ರಚಾರ ಎನಿಸಿಕೊಳ್ಳುತ್ತದೆ. ಇದು ಸ್ವಾಭಾವಿಕ. ಸಂದರ್ಭ ಬಂದಾಗ ನಾನು ದೇವರ ವಿಷಯದಲ್ಲಿ ನನ್ನ ಅಭಿಪ್ರಾಯ ಹೇಳಿದ್ದೂ ಅಷ್ಟೇ ಸ್ವಾಭಾವಿಕ. ನನಗೆ ಪ್ರಚಾರ ಮಾಡುವ ಚಪಲವೂ ಇಲ್ಲ; ನನ್ನ ನಿಲುವನ್ನು ಬಚ್ಚಿಡುವ ಹಿಂಜರಿಕೆಯೂ ಇಲ್ಲ" ಎಂದು ಬಹಳ ಸ್ಪಷ್ಟವಾಗಿ ತಮ್ಮ ನಿಲುವನ್ನು ವ್ಯಕ್ತಪಡಿಸಿದ್ದಾರೆ. ವಾಸ್ತವ ಮತ್ತು ನಂಬುಗೆಗಳು ಒಂದನ್ನೊಂದು ತಳುಕಿಹಾಕಿಕೊಂಡಿವೆ. ಏನೇ ಆಗಲಿ ಹಳತು ಹೊನ್ನೇ. ಅದನ್ನು ಶೋಧಿಸಿ ಚೊಕ್ಕಗೊಳಿಸಿ ನಮಗೆ ಬೇಕಾದ ಆಭರಣ ಮಾಡಿಕೊಳ್ಳಲು ಸಾರಸ್ವತ ಪರಂಪರೆಯ ಮೊರೆಹೊಗುವುದು ಅವಶ್ಯವೆಂಬುದು ನನ್ನ ಭಾವನೆ.

# ನೆನಪಿನ ಹೊತ್ತಗೆಯಲ್ಲಿ ಮಳೆಯ ನೆನಪುಗಳು

■ ಮಮತಾ ಶೃಂಗೇರಿ.

ಮಳೆ ಎಂದರೆ ಸಾಮಾನ್ಯವಾಗಿ ಎಲ್ಲರಿಗೂ ಇಷ್ಟವೂ ಹೌದು, ಕಷ್ಟವೂ ಹೌದು. ಬಿಸಿಲಲ್ಲಿ ಒಣಗಿ, ಬೇಗೆಯಲ್ಲಿ ಬೆಂದಾಗ, ತಂಪಾದ ಮಳೆ ಹಿತವಾದ ಅನುಭವವನ್ನು ನೀಡುತ್ತದೆ. ಮೊದಲ ಮಳೆ ಎಲ್ಲರಿಗೂ ಸಂತಸವನ್ನು ತರುತ್ತದೆ. ಮೊದಲ ಮಳೆಯಲ್ಲಿ ಮೂಡುವ ಮಣ್ಣಿನ ಘಮ ಅಹ್ಲಾದಕರವಾದ ಅನುಭವವನ್ನು ನೀಡುತ್ತದೆ. ಆದರೆ ಮಳೆ ಸುರಿದು ಸುರಿದು ಇಳೆ ತಂಪಾಗಿ,ಚಳಿ ಕೊರೆಯುವಾಗ, ಧೋ ಎಂದು ಸುರಿಯುವ ಮಳೆ "ಯಪ್ಪಾ ಎಷ್ಟೊಂದು ಮಳೆ"ಎನಿಸುತ್ತದೆ.

ಧಾರಾಕಾರವಾಗಿ ಸುರಿಯುವ ಮಳೆಯಿಂದ ಹಾನಿಯೂ ಉಂಟಾಗುತ್ತದೆ, ಆಗೆಲ್ಲಾ ಮನಸ್ಸಿನೊಳಗೆ ಕಳವಳ ಉಂಟಾಗುತ್ತದೆ. ಧುಮ್ಮಿಕ್ಕಿ ಹರಿಯುವ ಹಳ್ಳಕೊಳ್ಳ ನದಿ ತೊರೆಗಳು ಕಣ್ಣಿಗೆ ಆನಂದವನ್ನು ನೀಡುತ್ತದೆ, ಅದರ ಭೋರ್ಗರೆವ ಸದ್ದಿಗೆ ಮೈ ಮನವೆಲ್ಲಾ ರೋಮಾಂಚನಗೊಳ್ಳುತ್ತದೆ, ಜೊತೆಗೆ ಮಳೆಗಾಲದಲ್ಲಿ ಸಂಭವಿಸುವ ಅನೇಕ ಅವಘಡಗಳು, ಅಪಘಾತಗಳು ನೀರಿನಲ್ಲಿ ಕೊಚ್ಚಿ ಹೋಗುವ ಜನ ಜಾನುವಾರು, ಇವನ್ನೆಲ್ಲ ದಿನಪತ್ರಿಕೆಯಲ್ಲಿ, ವಾರ್ತೆಯಲ್ಲಿ ನೋಡಿದಾಗ ಮನದಲ್ಲಿ ದುಗುಡವೇಳುತ್ತದೆ.

ಚಂದದ ಮನೆ ಒಳಗೆ, ಬೆಚ್ಚನೆ ಗೂಡಿನೊಳಗೆ ಕುಳಿತು, ಹೊರಗೆ ಸುರಿಯುವ ಮಳೆಯನ್ನು ನೋಡುವುದು ನಿಜವಾಗಿಯೂ ಆನಂದ. ಮಲೆನಾಡಿನಲ್ಲಿ ಕಾಣುವ ಸಾಲು ಸಾಲು ಏರುತಗ್ಗು ವಿಶಾಲ ಪ್ರದೇಶದ ಭತ್ತದ ಗದ್ದೆಗಳಲ್ಲಿ ಬೀಳುವ ಮಳೆ ನೋಡುವುದು ನಯನ ಮನೋಹರ. ಸುತ್ತಲ ಕಾಡು, ಅಲ್ಲಲ್ಲಿ ಮಂಜಿನಲ್ಲಿ ಮುಳುಗಿದ ಮನೆಗಳು, ಮಳೆಯಲ್ಲಿ ಓಡಾಡುವ ಸಾಕು ಪ್ರಾಣಿಗಳು, ಪ್ರಕೃತಿಯು ಸುಂದರ ಹಸಿರನ್ನು ಉಟ್ಟು ಮಳೆ ನೀರಲ್ಲಿ ತೊಯ್ದು, ಫಳಫಳ ಹೊಳೆಯುವ ಅದ್ಭುತ ದೃಶ್ಯವನ್ನು ಬರೀ ಮಾತುಗಳಲ್ಲಿ ಹೇಳಲಾಗು ವುದಿಲ್ಲ. ಅದನ್ನು ಆಸ್ವಾದಿಸಿದವರಿಗಷ್ಟೇ ಗೊತ್ತು ಮಳೆಯ ಮೆರುಗು ಏನೆಂದು.

ಮನೆಯೊಳಗಡೆ ಕುಳಿತು ಕಿಟಕಿಗೆ ಮುಖವಿಟ್ಟು ವಿಶಾಲ ಅಂಗಳದಲ್ಲಿ ಬೀಳುವ ಮಳೆಗೆ ಏಳುವ ಗುಳ್ಳೆಗಳ ಎಣಿಸುವುದು ಹುಚ್ಚಾಟವೆನಿಸಿದರೂ, ಅದು ಎಷ್ಟೋ ಜನರ ಪ್ರಿಯವಾದ ಆಸೆಯೂ ಹೌದು. ಬಾಲ್ಯದಲ್ಲಿ ಸೂರಿಂದ ಬೀಳುವ ನೀರಲ್ಲಿ ಕಾಗದದ ದೋಣಿಯನ್ನು ಬಿಟ್ಟು ಆನಂದಿಸಿದ್ದು ಯಾರಿಗೂ ಮರೆಯಲು ಸಾಧ್ಯವಿಲ್ಲ. ಮಳೆಗಾಲ ಬಂತೆಂದರೆ ಹೀಗೆ ಸವಿ ನೆನಪುಗಳ ಒಂದು ದೊಡ್ಡ ಹೊತ್ತಗೆಯೇ ತೆರೆದುಕೊಳ್ಳುತ್ತದೆ, ರಸ್ತೆ ಬದಿಗಳಲ್ಲಿ ಸಾಗುವಾಗ ಹರಿಯುವ ನೀರಿನಲ್ಲಿ ಕಾಲನ್ನು ಎಳೆದುಕೊಂಡು, ನೀರಾಟವಾಡುತ್ತಾ ಸಾಗುತ್ತಿದ್ದ ದಿನಗಳನ್ನು ಮರೆಯಲಾಗದು. ಹಾಗೆಯೇ ಮಳೆಗಾಲದಲ್ಲಿ ಹೊರಗೆ ಓಡಾಡುವಾಗ, ಇದ್ದಕ್ಕಿದ್ದಂತೆ ಬೀಸಿದ ಗಾಳಿ, ಜೋರಾಗಿ ಸುರಿಯುವ ಮಳೆಗೆ ಹಿಡಿದುಕೊಂಡು ಹೋಗಿದ್ದ ಛತ್ರಿ ತಿರುಗು



ಮುರುಗಾಗಿ ಹಾರಿ ಹೋಗಿ, ಮೈಯೆಲ್ಲಾ ಮಳೆ ನೀರಲ್ಲಿ ತೊಯ್ದು ಹೋಗಿ, ಜ್ವರ ಬಂದು ಮಲಗಿದ್ದ ನೆನಪುಗಳು, ಹೀಗೆ ತೆರೆದಷ್ಟು ಮುಗಿಯದ ಹಾಳೆಗಳು ಮಳೆಗಾಲದ ನೆನಪಿನ ಪುಸ್ತಕದಲ್ಲಿ ಬೆಚ್ಚಗೆ ಉಳಿದುಕೊಂಡಿದೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

ಕವಿ ಮನಸು

## ಉಳುವ ಯೋಗಿ



ಕವಿದಿದೆ ಕಾರ್ಮೋಡದ ಕಪ್ಪು
ನಡುವೆ ಕಿರಣದ ಬಿಳುಪು
ವರುಣನ ಅಪ್ಪುಗೆಯ ಬಿಸುಪು
ರೈತರ ಮೊಗದಲಿ ಹುರುಪು

ಸುರಿಯಿತು ಮುಂಗಾರು ಮಳೆ
ತುಂಬಿ ಹರಿಯುತಿದೆ ಹೊಳೆ
ಹಸಿರನು ಹೊದ್ದಿದೆ ಇಳೆ
ಅರಳಿದೆ ಎಲ್ಲೆಡೆ ಜೀವಕಳೆ

ಎತ್ತನು ನೇಗಿಲಿಗೆ ಹೂಡಿ
ಉಳುವರು ಹೊಲವನು ಜೋಡಿ
ರೈತರೇ ದೇಶದ ಜೀವನಾಡಿ
ಅವರ ತ್ಯಾಗವ ಮರೆಯಬೇಡಿ

**– ಚೇತನ ಭಾರ್ಗವ, ಬೆಂಗಳೂರು**

## ಅಪ್ಪ

ಅಪ್ಪ ಎಂದರೆ ಪ್ರೀತಿಯ ಕಡಲು,
ನಮ್ಮ ಬಾಳಿನ ಆಧಾರ, ಬೆಂಬಲ.
ಕಷ್ಟದಲ್ಲೂ ನಗುತಿರುವ ಅಪ್ಪ,
ನಮ್ಮ ಕನಸುಗಳಿಗೆ ಬಣ್ಣ ತುಂಬುವ ಅಪ್ಪ.

ನಮಗಾಗಿ ದುಡಿದು ಸುಸ್ತಾದ ದೇಹ,
ನಗುಮೊಗದ ಹಿಂದೆ ನೂರಾರು ತ್ಯಾಗ.
ನಡೆದ ದಾರಿಯಲಿ ಬೆಳಕಾಗಿ ಬಂದ,
ಸಾವಿರ ಕಥೆಗಳ ಹೇಳುವ ಅಪ್ಪ.

ಪ್ರತಿ ಹೆಜ್ಜೆಯಲ್ಲೂ ಜೊತೆಗಿರುವ ಶಕ್ತಿ,
ನಿಮ್ಮ ಪ್ರೀತಿಗೆ ಇಲ್ಲ ಕೊನೆಯೆಂಬ ಭಕ್ತಿ.
ಅಪ್ಪ ಎಂದರೆ ಬರೀ ಪದವಲ್ಲ,
ಅದು ನಮ್ಮ ಜೀವ, ನಮ್ಮ ಸರ್ವಸ್ವ.

ನಿಮಗೆ ನಮ್ಮ ಅನಂತ ಪ್ರೀತಿ, ಅಪ್ಪಾ,
ನಿಮಗೆ ನಮ್ಮ ನಮನ.

– ಮಣಿ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

COLD PRESSED OILS
HEALTH Benefits



- Heart Healthy
- Diabetes Friendly
- Healthy Skin & More
- Hair Fall Control

Nandi Enterprises
C/o HAMPI TIMES
Valmiki Circle, HOSAPETE
9482599089

# ಕಳೆದುಹೋದ ಪರ್ಸ್, ಗೆದ್ದ ಡಿಜಿಟಲ್ ಪಾವತಿ!

## ರೀ... ಪರ್ಸ್ ಮರೆತರೂ ಪರ್ವಾಗಿಲ್ಲ, ನಿಮ್ಮ ಫೋನ್ ಇದ್ರೆ ಸಾಕು ಬನ್ನಿ

ಒಂದು ಕಾಲದಲ್ಲಿ ಬಸ್ ಕಂಡಕ್ಟರ್‌ಗಳು "ಸಾರ್, ಚಿಲ್ಲರೆ ಕೊಡಿ!" ಎಂದು ಕೂಗಿದರೆ, ಪ್ರಯಾಣಿಕರು ಜೇಬು ತಡಕಾಡಿ, "ಅಯ್ಯೋ, ಚಿಲ್ಲರೆ ಇಲ್ಲ!" ಎಂದು ತಲೆಕೆಡಿಸಿಕೊಳ್ಳುತ್ತಿದ್ದರು. ಅಂಗಡಿಯಲ್ಲಿ ತರಕಾರಿ ಕೊಳ್ಳುವಾಗ, "ಐದು ರೂಪಾಯಿ ಕಡಿಮೆ ಇದೆ, ನಾಳೆ ಕೊಡ್ತೀನಿ" ಎಂಬ ಮಾತುಗಳು ಸಾಮಾನ್ಯವಾಗಿದ್ದವು. ಜೇಬಿನಲ್ಲಿ ಚಿಲ್ಲರೆ ಇದೆಯೋ ಇಲ್ಲವೋ ಎಂಬ ಚಿಂತೆ ನಿತ್ಯವೂ ಇತ್ತು.

ಈಗಿನ ಪರಿಸ್ಥಿತಿ? ಕೈಯಲ್ಲಿ ಸ್ಮಾರ್ಟ್ ಫೋನ್, ಡಿಜಿಟಲ್ ಪಾವತಿಯ ಮಾಯಾಜಾಲ! ಎಲ್ಲ ಸಮಸ್ಯೆಗಳಿಗೂ ಒಂದೇ ಕ್ಲಿಕ್ನಲ್ಲಿ ಪರಿಹಾರ! ಬಹುತೇಕ ಸಾರಿಗೆ ಬಸ್ಗಳಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಟಿಕೆಟ್ ತೆಗೆದುಕೊಳ್ಳಬಹುದು. ಚಾಮರಾಜನಗರ ವಿಭಾಗದಲ್ಲಿ ಕಳೆದ ಐದು ತಿಂಗಳಲ್ಲಿ 3.2 ಕೋಟಿ ರೂಪಾಯಿ ಮೌಲ್ಯದ ಯುಪಿಐ ವ್ಯವಹಾರಗಳು ನಡೆದಿವೆ. ಇದು ನಗದುರಹಿತ ಕ್ರಾಂತಿಯ ಆರಂಭ!



### ಯುಪಿಐ ಎಂದರೇನು?

ಯುನಿಫೈಡ್ ಪೇಮೆಂಟ್ಸ್ ಇಂಟರ್ಫೇಸ್ (ಯುಪಿಐ) ಎಂಬುದು ಎಲ್ಲ ಬ್ಯಾಂಕ್ಗಳನ್ನು ಒಂದೇ ಜಾಲಬಂಧದಲ್ಲಿ ಸಂಪರ್ಕಿಸುವ ತಂತ್ರಜ್ಞಾನ. ಗೂಗಲ್ ಪೇ, ಫೋನ್ಪೇ, ಪೇಟಿಎಂ ಅಥವಾ ಇತರ ಯಾವುದೇ ಆಪ್ ಬಳಸಿದರೂ, ಯುಪಿಐ ಇಬ್ಬರ ಖಾತೆಗಳ ನಡುವೆ ಸೇತುವೆಯಂತೆ ಕಾರ್ಯನಿರ್ವಹಿಸಿ, ಹಣವನ್ನು ಸುರಕ್ಷಿತವಾಗಿ ಗಮ್ಯಸ್ಥಾನಕ್ಕೆ ತಲುಪಿಸುತ್ತದೆ. ಯುಪಿಐ ವಿಶೇಷವಿರುವುದು ಅದರ 24ಥ7 ಸೌಲಭ್ಯದಿಂದ, ರಾತ್ರಿಯಲ್ಲೂ ಬ್ಯಾಂಕ್ ವಹಿವಾಟು ಸಾಧ್ಯವಾಗುವುದು ಮತ್ತು ಒಂದೇ ಆಪ್ನಲ್ಲಿ ನಿಮ್ಮ ಎಲ್ಲ ಬ್ಯಾಂಕ್ ಖಾತೆಗಳನ್ನು ಒಗ್ಗೂಡಿಸಿ, ಕ್ಷಣಾರ್ಧದಲ್ಲಿ ಹಣ ವರ್ಗಾವಣೆ ಮಾಡುವ ಸಾಮರ್ಥ್ಯದಿಂದ.

### ಕ್ಯೂಆರ್ ಕೋಡ್ ಕಮಾಲು!

ಯುಪಿಐಯ ಕೀಲಿಕೈ ಕ್ಯೂಆರ್ (ಕ್ವಿಕ್ ರೆಸ್ಪಾನ್ಸ್) ಕೋಡ್. ಈ ಚೌಕಾಕಾರದ ಗೂಢಚಿತ್ರವು ಅತ್ಯಾಧುನಿಕ ಡಿಜಿಟಲ್ ಸಂವಹನ ವ್ಯವಸ್ಥೆಯಾಗಿದೆ. ಇದರೊಳಗೆ ಪಾವತಿಗೆ ಸಂಬಂಧಿಸಿದ ಎಲ್ಲ ವಿವರಗಳು ಸುರಕ್ಷಿತವಾಗಿ ಸಂಗ್ರಹವಾಗಿರುತ್ತವೆ. ಯುಪಿಐ ಸಕ್ರಿಯ ಆಪ್ ಮೂಲಕ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ಪಿನ್ ನಮೂದಿಸಿದ ಕೆಲವೇ ಸೆಕೆಂಡುಗಳಲ್ಲಿ ಗೂಢಲಿಪಿಯನ್ನು ಡಿಕೋಡ್ ಮಾಡಿ, ನಿಮ್ಮ ಬ್ಯಾಂಕ್ ಖಾತೆಯಿಂದ ಗ್ರಾಹಕರ ಖಾತೆಗೆ ಹಣ ವರ್ಗಾವಣೆಯಾಗುತ್ತದೆ. ಸಾಂಪ್ರದಾಯಿಕ ಬಾರ್ಕೋಡ್ಗಿಂತ ಕ್ಯೂಆರ್ ಕೋಡ್ 10 ಪಟ್ಟು ವೇಗವಾಗಿ ಕೆಲಸ ಮಾಡುತ್ತದೆ!



ಡಾ. ಎಸ್.ಎಂ. ಶಶಿಧರ್
ಟೆಕ್ ಪರಿಣತರು

Scan For Digital Colourful
HAMPI TIMES E-paper

### ಡಿಜಿಟಲ್ ಪಾವತಿ : ತಂತ್ರಜ್ಞಾನದ ಜಾದೂ!

ಡಿಜಿಟಲ್ ಪಾವತಿಯೆಂದರೆ ನಗದು ಬದಲಿಗೆ ಇಂಟರ್ನೆಟ್ ಅಥವಾ ಮೊಬೈಲ್ ಮೂಲಕ ಹಣ ಕಳುಹಿಸುವ ವ್ಯವಸ್ಥೆ. ಇದು ನಿಮ್ಮ ಖಾತೆಯಲ್ಲಿರುವ ಹಣವನ್ನು ಡಿಜಿಟಲ್ ಸಂಕೇತಗಳಾಗಿ (0–1–0–1) ಪರಿವರ್ತಿಸಿ, ಕ್ಷಣಾರ್ಧ ದಲ್ಲಿ ಬ್ಯಾಂಕ್ ಖಾತೆಗೆ ತಲುಪಿಸುತ್ತದೆ. ಭಾರತವು ಇಂದು ಡಿಜಿಟಲ್ ಪಾವತಿ ಕ್ರಾಂತಿಯ ಮುಂಚೂಣಿಯಲ್ಲಿದೆ. ಗ್ರಾಮೀಣ ಕಿರಾಣಿ ಅಂಗಡಿಗಳಿಂದ ಮಹಾನಗರದ ಶಾಪಿಂಗ್ ಮಾಲ್ಗಳವರೆಗೆ, ಕ್ಯೂಆರ್ ಕೋಡ್ಗಳು ಮತ್ತು ಯುಪಿಐ ಪಾವತಿಗಳು ಹೊಸ ಆರ್ಥಿಕ ಸಂಸ್ಕೃತಿಯನ್ನು ರೂಪಿಸುತ್ತಿವೆ. ಗ್ರಾಮೀಣ ಮಹಿಳೆಯೊಬ್ಬಳು ಮೊಬೈಲ್ ಫೋನ್ ಮೂಲಕ ಹಣ ಸ್ವೀಕರಿಸುವುದು ಈಗ ಸಾಮಾನ್ಯ ದೃಶ್ಯವಾಗಿದೆ. ಒಂದು ಕಾಲದಲ್ಲಿ ನಗರಗಳಿಗೆ ಸೀಮಿತವಾಗಿದ್ದ ಡಿಜಿಟಲ್ ಪಾವತಿಗಳು ಈಗ ಹಳ್ಳಿಯ ಚಹಾ ಅಂಗಡಿಗಳು, ಬೀದಿಬದಿಯ ವ್ಯಾಪಾರಿಗಳು, ದೇವಸ್ಥಾನದ ಮುಂದೆ ಭಿಕ್ಷೆ ಬೇಡುವವರಿಗೂ ತಲುಪಿ, ಎಲ್ಲೆಡೆ ವ್ಯಾಪಕವಾಗಿವೆ.




ಇತ್ತೀಚಿನ ವರದಿಗಳ ಪ್ರಕಾರ, ಭಾರತವು ತಿಂಗಳಿಗೆ ಸರಾಸರಿ 12 ಬಿಲಿಯನ್ ಯುಪಿಐ ವಹಿವಾಟುಗಳೊಂದಿಗೆ ವಿಶ್ವದ ಅತಿದೊಡ್ಡ ಡಿಜಿಟಲ್ ಪಾವತಿ ವ್ಯವಸ್ಥೆಯ ರಾಷ್ಟವಾಗಿದೆ. ಕಳೆದ ವರ್ಷ ಕ್ಯೂಆರ್ ಕೋಡ್ ಮೂಲಕ 15,547 ಕೋಟಿಗೂ ಹೆಚ್ಚು ಪಾವತಿಗಳು ನಡೆದಿವೆ. ಗೂಗಲ್ ಇಂಡಿಯಾ ವರದಿಯಂತೆ, ಗ್ರಾಮೀಣ ಪ್ರದೇಶದ 48% ಜನರು ಈಗ ಡಿಜಿಟಲ್ ಪಾವತಿಗಳಲ್ಲಿ ಭಾಗವಹಿಸುತ್ತಿದ್ದಾರೆ. ಕೇವಲ ಮೂರು ವರ್ಷಗಳಲ್ಲಿ ನಗದು ವಹಿವಾಟು 89% ರಿಂದ 59% ಕ್ಕೆ ಇಳಿದಿದೆ.

### ಬದಲಾವಣೆಯ ಕತೆಗಳು

ಬಳ್ಳಾರಿ ಜಿಲ್ಲೆಯ ಮೋಕಾ ಗ್ರಾಮದಲ್ಲಿ ಗಂಗಮ್ಮ ಎಂಬ ದಿನಸಿ ಅಂಗಡಿಯ ಒಡತಿ ಮೊದಲು ಕೇವಲ ನಗದು ಸ್ವೀಕರಿಸುತ್ತಿದ್ದರು. ಸ್ಥಳೀಯ ಯುವಕನ ಸಹಾಯದಿಂದ ಆಕೆಯ ಮೊಬೈಲ್ನಲ್ಲಿ ಭೀಮ್ ಯುಪಿಐ ಆಪ್ ಸ್ಥಾಪಿಸಲಾಯಿತು. ಈಗ ಆಕೆಯ ಅಂಗಡಿಯಲ್ಲಿ ಗ್ರಾಹಕರು 10 ರೂಪಾಯಿ ಚಾಕೊಲೇಟ್ಗೂ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಪಾವತಿಸುತ್ತಾರೆ. "ಫೋನ್ಪೇಯಲ್ಲಿ ರೂಪಾಯಿ ಹತ್ತು ಸ್ವೀಕರಿಸಲಾಗಿದೆ. ಧನ್ಯವಾದಗಳು" ಎಂಬ ಧ್ವನಿ ಸಂದೇಶ ಗಂಗಮ್ಮನ ಮುಖದಲ್ಲಿ ಮಂದಹಾಸ ಮೂಡಿಸುತ್ತದೆ. "ನನ್ನ ಫೋನ್, ಈಗ ನನ್ನ ನಗದು," ಎಂದು ಲೀಲಾವತಿ ಉತ್ಸಾಹದಿಂದ ಹೇಳುತ್ತಾರೆ. ದಾವಣಗೆರೆಯ ಆಟೋ ಚಾಲಕ ಈರಣ್ಣ ದಿನವಿಡೀ ಕ್ಯೂಆರ್ ಕೋಡ್ ಮೂಲಕ ಪಾವತಿಗಳನ್ನು ಸ್ವೀಕರಿಸುತ್ತಾರೆ. "ಹೆಚ್ಚಿನ ಆದಾಯ, ಕಡಿಮೆ ಅಪಾಯ, ನೇರವಾಗಿ ಖಾತೆಗೆ," ಎಂದು ಅವರು ವಿವರಿಸುತ್ತಾರೆ. ಈ ಪ್ರಸಂಗಗಳು ಡಿಜಿಟಲ್ ಪಾವತಿಯು ಕೇವಲ ತಂತ್ರಜ್ಞಾನವಲ್ಲ, ಜೀವನದ ಭಾಗವಾಗಿದೆ ಎಂಬುದನ್ನು ತೋರಿಸುತ್ತವೆ.

### ಸವಾಲುಗಳು

ಈ ಪಯಣದಲ್ಲಿ ಸವಾಲುಗಳೂ ಇವೆ. ಟ್ರಾಯ್ ವರದಿಯಂತೆ, ಗ್ರಾಮೀಣ ಭಾರತದಲ್ಲಿ 100 ಜನರಲ್ಲಿ ಕೇವಲ 37 ಜನರಿಗೆ ಸ್ಥಿರ ಇಂಟರ್ನೆಟ್ ಸಂಪರ್ಕವಿದೆ. 60 ವರ್ಷ ಮೇಲ್ಪಟ್ಟವರಲ್ಲಿ ಕೇವಲ 12% ಜನರು ಡಿಜಿಟಲ್ ವಹಿವಾಟುಗಳಲ್ಲಿ ಸಕ್ರಿಯರಾಗಿದ್ದಾರೆ, ತಂತ್ರಜ್ಞಾನ ಅನಕ್ಷರತೆಯ ಕೊರತೆಯಿಂದ ಹಿಂದುಳಿಯುತ್ತಿದ್ದಾರೆ. ಅಇಖಖಿ–ಖಓ ವರದಿಯ ಪ್ರಕಾರ, 2023ರಲ್ಲಿ 1.5 ಲಕ್ಷಕ್ಕೂ ಹೆಚ್ಚು ಸೈಬರ್ ವಂಚನೆ ಪ್ರಕರಣಗಳು ದಾಖಲಾಗಿವೆ. ಓಟಿಪಿ ತಂತ್ರ, ನಕಲಿ ಲಿಂಕ್ಗಳು, ಮೋಸದ ಆಪ್ಗಳು ಜನರಲ್ಲಿ ಭಯವನ್ನುಂಟುಮಾಡಿವೆ.

### ಮುಂದಿನ ಹೆಜ್ಜೆಗಳು

ಡಿಜಿಟಲ್ ಸಾಕ್ಷರತಾ ಶಿಬಿರಗಳು ಪ್ರತಿ ಗ್ರಾಮಕ್ಕೂ ತಲುಪಬೇಕು. ಸೈಬರ್ ಭದ್ರತೆಯ ತರಬೇತಿಯು ಶಾಲೆಗಳಿಂದಲೇ ಆರಂಭವಾಗಬೇಕು. 5ಉ ಸಂಪರ್ಕ ಗ್ರಾಮೀಣ ಪ್ರದೇಶಗಳಿಗೆ ವಿಸ್ತರಿಸಿದಾಗ ಡಿಜಿಟಲ್ ಪಾವತಿಗಳ ಸಂಪೂರ್ಣ ಸಾಮರ್ಥ್ಯವನ್ನು ಸಾಧಿಸಬಹುದು. ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಕಮ್ಯೂನಿಟಿ ಡಿಜಿಟಲ್ ಸಹಾಯ ಕೇಂದ್ರಗಳ ಸ್ಥಾಪನೆಯಿಂದ ಜ್ಞಾನ ಹಂಚಿಕೆ ಸಾಧ್ಯವಾಗುತ್ತದೆ.

### ನಗದುರಹಿತ ಭವಿಷ್ಯ

ಭಾರತ ಸರ್ಕಾರದ ಜನ್–ಧನ್ ಯೋಜನೆಯ ಮೂಲಕ ಐವತ್ತು ಕೋಟಿಗೂ ಹೆಚ್ಚು ಬ್ಯಾಂಕ್ ಖಾತೆಗಳು ತೆರೆಯಲ್ಪಟ್ಟಿದ್ದು, ಡಿಜಿಟಲ್ ವಹಿವಾಟುಗಳಿಗೆ ಬುನಾದಿಯಾಗಿವೆ. ಇದರೊಂದಿಗೆ, ಇತ್ತೀಚೆಗೆ ಆರಂಭಿಸಲಾದ 'ಯುಪಿಐ ಲೈಟ್' ಯೋಜನೆಯು ಕಡಿಮೆ ಮೊತ್ತದ ವಹಿವಾಟುಗಳಿಗೆ ಸರಳವಾದ, ಇಂಟರ್ನೆಟ್–ಮುಕ್ತ ಆಯ್ಕೆಯನ್ನು ಒದಗಿಸುತ್ತದೆ. ಡಿಜಿಟಲ್ ಪಾವತಿಗಳು ಕಾಗದದ ನೋಟುಗಳ ಬಳಕೆಯನ್ನು ಕಡಿಮೆ ಮಾಡುವ ಮೂಲಕ ಪರಿಸರ ಸಂರಕ್ಷಣೆಗೆ ಸಹಕಾರಿಯಾಗಿವೆ..

ನಾವು ಇಂದು ಒಂದು ತಿರುವಿನ ಬಿಂದುವಿನಲ್ಲಿದ್ದೇವೆ, ಹಳೆಯ ತೊಡಕುಗಳ ನಡುವೆ ಹೊಸ ಸಾಧ್ಯತೆಗಳ ಬೆಳಕು ಮಿಂಚುತ್ತಿದೆ. ತಂತ್ರಜ್ಞಾನ, ಶಿಕ್ಷಣ, ಜಾಗೃತಿ, ಮತ್ತು ಸಹಭಾಗಿತ್ವವೇ ನಗದುರಹಿತ ಭವಿಷ್ಯದ ನಾಲ್ಕು ಸ್ತಂಭಗಳು. ನಗದುರಹಿತ ಭಾರತದ ಕನಸು ಈಗ ಸಾಕಾರಗೊಳ್ಳುತ್ತಿದೆ. ಆ ದಿನ ಹಿಂದೆಂದಿಗಿಂತಲೂ ಈಗ ಸಮೀಪದಲ್ಲಿದೆ!

# ಅಪ್ಪನೆಂಬ ಕಾಳಜಿಯ ಕಡಲು

ಅಮ್ಮ ತುತ್ತು ನೀಡಿ ಸಲಹುವ ದೈವವಾದರೆ, ಅಪ್ಪ ಪೋಷಿಸಿ ಬದುಕಿಗೆ ರೂಪ ನೀಡಿ, ಭವ್ಯ ಭವಿಷ್ಯವ ರೂಪಿಸುವ ನಿಜ ಬ್ರಹ್ಮನಾಗಿದ್ದಾನೆ.



ಅಪ್ಪ ಅಮ್ಮನಂತಲ್ಲ ಸ್ವಲ್ಪ ಸಿಟ್ಟು, ಸೆಡವು, ಜೊತೆಗೆ ಗಂಭೀರ ಬಾವ, ಅಮ್ಮನ ಹತ್ತಿರ ತೋರಿಸುವ ಚೇಷ್ಟೆ ಸಲುಗೆ,ಅಪ್ಪನ ಬಳಿ ನಡೆಯೋಲ್ಲ! ಒಂದು ರೀತಿ ಮನೆಯ ಜಡ್ಜ್ ಇದ್ದ ಹಾಗೇ. ಹೌದು ಈ ಪಾತ್ರ ನೀವು ಸರಿಯಾಗಿ ನಿರ್ವಹಿಸದಿದ್ದರೆ ಮನೆಯ ಪರಿಸ್ಥಿತಿ ಹಳಿ ತಪ್ಪಿ ಹೋಗುತ್ತದೆ. ಒಂದು ರೀತಿಯಲ್ಲಿ ಗಾಳಿಪಟವನ್ನು ಆರಿಸುವ ಸಂದರ್ಭದಲ್ಲಿ ದಾರವನ್ನ ಸುಲಭವಾಗಿ ಹಿಡಿದುಕೊಂಡರೆ ತಪ್ಪಿಸಿಕೊಂಡು ಹೋಗುವ ಸಂಭವ, ಹಿಡಿದು ಗಟ್ಟಿಯಾಗಿ ಎಳೆದರೆ ಕತ್ತರಿಸಿಕೊಂಡು ಬೀಳುವ ಪರಿಸ್ಥಿತಿ ಹಾಗಾಗಿ ಕೌಟುಂಬಿಕ ಬದುಕನ್ನ ಸಮತೋಲನದಲ್ಲಿ ತೆಗೆದುಕೊಂಡ ವಂತಹ ಜವಾಬ್ದಾರಿ ಅಪ್ಪನ ಹೆಗಲ ಮೇಲಿರುತ್ತದೆ.

ಇತ್ತೀಚಿಗೆ ಸಾಮಾಜಿಕ ಮಾಧ್ಯಮಗಳಲ್ಲಿ ತನ್ನ ಮಗನನ್ನ ಕಾಲೇಜಿಗೆ ಅಡ್ಮಿಶನ್ ಮಾಡಿಸಲು ಹೋಗಿದ್ದ ತಂದೆ ಮತ್ತು ಮಗನ ಚಪ್ಪಲಿಗಳನ್ನು ಕ್ಲಿಕ್ಕಿಸಿ ಹರಿ ಬಿಡಲಾಗಿತ್ತು! ಇದು ತುಂಬಾ ವೈರಲ್ ಆಗಿತ್ತು ಕಾರಣವೇನೆಂದರೆ ಮಗನವು ಸ್ಪಾರ್ಕ್ಸ್ ಕಂಪನಿಯ ಬ್ರಾಂಡ್ ಚಪ್ಪಲಿಗಳು, ತಂದೆಯು ಧರಿಸಿದ್ದ ಚಪ್ಪಲಿಗಳು ತುಂಬಾ ಹಳೆಯ, ಹಾಳಾದ ಮತ್ತು ತೂತಾದ ಚಪ್ಪಲಿಗಳಾಗಿದ್ದವು. ಇದು ತಂದೆಯ ತ್ಯಾಗವನ್ನ ತೋರಿಸುವ ಒಂದು ಸನ್ನಿವೇಶ ಮಾತ್ರ. ಇದರ ಪಟ್ಟಿಗೆ, ಕಾಲರ್ ಹರಿದು ಬಣ್ಣ ಮಾಸಿದ ಬಟ್ಟೆಗಳು, ತಿಂಗಳಿಗೊಮ್ಮೆ ರಸ್ತೆಯಲ್ಲಿ ಕೈ ಕೊಡುವ ಬೈಕು, ಕುಟುಂಬದ ಹೆಚ್ಚಿನ ಖರ್ಚನ್ನು ನಿಭಾಯಿಸಲು ಕಂಪನಿಯಲ್ಲಿ ರಾತ್ರಿ ಪಾಳಿ. ಎದೆ ಎತ್ತರಕ್ಕೆ ಬೆಳೆದ ಮಗಳಿಗೆ ಒಳ್ಳೆಯ ಅಳಿಯನನ್ನು ಹುಡುಕುವ ಬರದಲ್ಲಿ ತೂತು ಬಿದ್ದ ಜೇಬು, ವಿಜೃಂಭಣೆಯ ಮದುವೆಗೆ ಮಣಬಾರದ ಸಾಲಕ್ಕೆ ಬಾಗಿದ ಬೆನ್ನು! ಸಾಲು ಸಾಲಾಗಿ ಬರುವ ಕುಟುಂಬದ ಖರ್ಚುಗಳಿಗೆ ನಿದ್ರೆ ಬಾರದೆ ಕೆಂಪಾದ ಕಣ್ಣುಗಳು. ಇಷ್ಟೆಲ್ಲ ನೋವುಗಳನ್ನ ಮನಸಲ್ಲಿಟ್ಟುಕೊಂಡು, ಏನು ಆಗಿಲ್ಲ ಎಂಬ ಗಟ್ಟಿತನವನ್ನು ತೋರಿಸುವವನೆ ಅಪ್ಪ!

ಮದುವೆಯಾದ ಹೊಸತರಲ್ಲಿ ಹಾರುವ ಹಕ್ಕಿಯಂತಿದ್ದವನು,ಅಪ್ಪನಾಗುತ್ತಲೇ ಮತ್ತಷ್ಟು ಜವಾಬ್ದಾರಿಯುತ ವ್ಯಕ್ತಿಯಾಗಿ ಮಾಗಲು ಸಿದ್ದನಾಗುತ್ತಾನೆ. ಖರ್ಚು ಕಡಿಮೆ ಮಾಡಿ ಉಳಿತಾಯದತ್ತ ಚಿತ್ತ ನೆಡುತ್ತಾನೆ. ಅಪ್ಪ ಹೇಳುತ್ತಿದ್ದ ಮಾತು ಈಗ ನೆನಪಿಗೆ ಬರುತ್ತದೆ ಅಪ್ಪನಾದ ಮೇಲೆ ನಿನಗೆ ಗೊತ್ತಾಗುತ್ತದೆ? ಎಂಬುದರ ಅರ್ಥ ಈಗೀಗ ಅರ್ಥವಾಗುತ್ತದೆ.

ಇತ್ತೀಚಿನ ಜಮಾನದಲ್ಲಿ ಅಪ್ಪನೆಂಬ ಪದವಿಯ ನಿರ್ವಹಣೆ ಅತ್ಯಂತ ಕಷ್ಟ ಸಾಧ್ಯವಾಗಿದೆ. ಕೌಟುಂಬಿಕ ಜೀವನ ಆಧುನಿಕರಣ ತೆಕ್ಕೆಗೆ ತೆರೆದುಕೊಂಡಂತೆಲ್ಲಾ ಹೆಚ್ಚಿನ ಭಾರವನ್ನು ಓರ್ವ ಅನಿವಾರ್ಯವನ್ನ ಸೃಷ್ಟಿಸಿದೆ.

ಎಷ್ಟೇ ಬಡ,ಮಧ್ಯಮ ವರ್ಗದ ಕೌಟುಂಬಿಕ ಹಿನ್ನೆಲೆ ಇದ್ದರೂ ಸಹ ಸಮೂಹ ಸನ್ನಿಗೆ ಒಳಗಾಗಿ ಪ್ರತಿಷ್ಠಿತ ಕಾನ್ವೆಂಟ್ ಗಳಲ್ಲಿ ಮಕ್ಕಳನ್ನು ಓದಿಸುವ ಹಠಕ್ಕೆ ಬೀಳುತ್ತಾರೆ! ಇದು ಎಷ್ಟರಮಟ್ಟಿಗೆ ಪ್ರಭಾವ ಬೀರಿದೆ ಎಂದರೆ ಇತ್ತೀಚಿಗೆ



35 ವರ್ಷದ ತಂದೆಯಾದ ಒಬ್ಬ ವ್ಯಕ್ತಿ ತನ್ನ ಒಂದುವರೆ ವರ್ಷದ ಮಗುವಿನ ಭವಿಷ್ಯದ ಶಿಕ್ಷಣಕ್ಕಾಗಿ ಕಿಡ್ನಿ ಮಾರಲು ಒಬ್ಬ ವೈದ್ಯರಿಗೆ ಕರೆ ಮಾಡಿ ಮಾತನಾಡಿದ್ದು ನಿಮಗೆಲ್ಲ ಗೊತ್ತೇ ಇದೆ. ಇಲ್ಲಿ ಆ ಯುವಕ ಬೇರೆ ಬೇರೆ ದುಡಿಯುವ ಮಾರ್ಗವನ್ನು ಅನುಸರಿಸಿ ತನ್ನ ಮಕ್ಕಳಿಗೆ ಶಿಕ್ಷಣ ನೀಡುವುದು ಬಿಟ್ಟು ಕಿಡ್ನಿ ಮಾರಲು ಮುಂದಾಗಿದ್ದು ನಾಚಿಕೆಗೇಡಿನ ಸಂಗತಿ ಎಂಬುದು ನೀವು ಹೇಳುವ ಮಾತಾದರು, ಅಪ್ಪನೆಂಬ ಜವಾಬ್ದಾರಿ ತನ್ನ ಮಕ್ಕಳಿಗಾಗಿ ಇಷ್ಟೆಲ್ಲ ತ್ಯಾಗಗಳಿಗೂ ಸಿದ್ಧಗೊಳಿಸುತ್ತದೆ ಎಂಬುದು ಸಹ ಸತ್ಯ.

ಪ್ರತಿಯೊಬ್ಬರ ಅಪ್ಪ ತನ್ನ ಮಕ್ಕಳಿಗಾಗಿ, ಅವರ ಉಜ್ವಲ ಭವಿಷ್ಯಕ್ಕಾಗಿ, ಅವರನ್ನು ಓದಿಸಲು, ಉತ್ತಮ ಶಿಕ್ಷಣ ನೀಡಲು, ರೈತನಾಗಿ ಸಿಡಿಲು ಮಳೆ ಗಾಳಿಗೆ ಬೆಚ್ಚದೆ ದುಡಿದುಡಿದು ಸವೆದಿದ್ದಾನೆ, ಕಾರ್ಮಿಕನಾಗಿ ಕಾರ್ಖಾನೆಗಳ ಬೃಹತ್ ಯಂತ್ರಗಳ ಸದ್ದಿಗೆ ಕಿವಿತಮಟೆ ಹರಿದರು, ಆಯ ತಪ್ಪಿದರೂ ಯಂತ್ರಗಳಿಗೆ ಆಹಾರವಾಗುವ ಅಪಾಯದಲ್ಲೂ ಮನಸ್ಸು ಗಟ್ಟಿ ಮಾಡಿಕೊಂಡು ದುಡಿ ದುಡಿದು ಹೈರಾಣಾಗಿದ್ದಾನೆ. ಆಟೋ,ಉಬರ್ ಚಾಲಕನಾಗಿ, ಪ್ರಯಾಣಿಕರ ದಬ್ಬಾಳಿಕೆ, ಮತ್ತು ದರ್ಪಧ ಮಾತುಗಳಿಂದ ಮನನೊಂದಿದ್ದಾನೆ, ಹೆಚ್ಚಿನ ಸಂಬಳ, ದುಡಿಮೆಗಾಗಿ ಊರು ತೊರೆದು ಕುಟುಂಬ ತೊರೆದು ಪ್ರೀತಿ ವಂಚಿತನಾಗಿದ್ದರು ತನ್ನ ಕುಟುಂಬದ ಸಂತೋಷಕ್ಕಾಗಿ ತನ್ನ ನೆಮ್ಮದಿಯನ್ನು ಪಣವಾಗಿಟ್ಟು ಕೆಲಸ ಮಾಡುತ್ತಿದ್ದಾನೆ.

ಕೆಲಸ ಮತ್ತು ವೃತ್ತಿಗಳು ಬೇರೆ ಬೇರೆಯಾದರೂ ಅಪ್ಪನಾಗಿ ಕೌಟುಂಬಿಕ ನಿರ್ವಹಣೆ ಪಾತ್ರವನ್ನು ನಿರ್ವಹಿಸುವ ಜವಾಬ್ದಾರಿಯು ಅತ್ಯಂತ ದೊಡ್ಡದು. ಈ ಪಾತ್ರವನ್ನು ಸರಿಯಾಗಿ ನಿರ್ವಹಿಸಿ ನಮಗೆ ಉತ್ತಮ ಭವಿಷ್ಯವನ್ನು ನಿರ್ಮಿಸಿ ಕೊಟ್ಟಿದ್ದಾನೆ ಅಪ್ಪ.

ಹಳ್ಳಿಗಳಿಂದ ದೂರದ ನಗರಗಳ ಕೆಲಸ, ಇಲ್ಲವೇ ಅಂತರ್ದೇಶಿಯ ಬ್ಯುಜಿ ಕೆಲಸಗಳ ನಡುವೆ, ನಿಮ್ಮದೇ ಕೌಟುಂಬಿಕ ಜಂಜಾಟಗಳ ಮಧ್ಯೆ, ನಿನಗಾಗಿ ದುಡಿದ ಅಪ್ಪನ ಜೊತೆ ಮಾತನಾಡದೆ ಎಷ್ಟೋ ದಿನಗಳು ಕಳೆದು ಹೋಗಿವೆ. ಅಪ್ಪ ಮಾತನಾಡದಿದ್ದರು ಹಣ ನೀಡದಿದ್ದರೂ, ಮಗನು ಅವನ ಕುಟುಂಬ ಚೆನ್ನಾಗಿರಲಿ ಎಂದು ಹಾರೈಸುವ ಜೀವ ಅಪ್ಪ.

ಸ್ನೇಹಿತರೆ ಜಗತ್ತು ತುಂಬಾ ಓಡುತ್ತಿದೆ ನಿಜ, ನೀವು ಓಡಬೇಕು ಇಲ್ಲದಿದ್ದರೆ ಇಲ್ಲಿನ ಸ್ಪರ್ಧೆ ಎದುರಿಸಲಾಗುವುದಿಲ್ಲ! ಅದೇ ಹೊತ್ತಿಗೆ ನಿನಗಾಗಿ, ನಿನ್ನ ಭವಿಷ್ಯಕ್ಕಾಗಿ ತನ್ನ ಯವನವನ್ನೇ ಮುಡುಪಾಗಿಟ್ಟ ಅಪ್ಪನಿಗೆ ಬಿಡುವಾದಾಗ ಒಂದೈದು ನಿಮಿಷ ಯೋಗಕ್ಷೇಮ ವಿಚಾರಿಸಿದರೆ ಅದುವೇ ನಿನ್ನ ತಂದೆಗೆ ಕೊಡುವ ದೊಡ್ಡ ಕೊಡುಗೆ. ಅಪ್ಪನೆಂಬ ಭರವಸೆಯಾಗಿದ್ದವನಿಗೆ ಜವಾ ಬ್ದಾರಿಯ ಮಕ್ಕಳಾಗಿ ನಾವು ಇರುವವರೆಗೂ ಪ್ರೀತಿ ಹಂಚೋಣ , ಅವರ ಇಳಿಗಾಲಕ್ಕೆ ಅಕ್ಕರೆಯನ್ನು ತೋರಿಸೋಣ.

ಅಂದ ಹಾಗೆ ಇಂದು ವಿಶ್ವ ಅಪ್ಪಂದಿರ ದಿನಾಚರಣೆ ವಿಶ್ ಯು ಹ್ಯಾಪಿ ಫಾದರ್ಸ್ ಡೇ ಅಪ್ಪ.

**– ಶಿವಣ್ಣ ಶಿಕ್ಷಕರು ಗಾಣಗಟ್ಟೆ.**

- Admissions
- Requirements
- Firm Branding
- Public Notice
- Change of Name

"Thousands of eyes, one newspaper. 'Hampi Times' delivers your message directly to Hampi Times engaged readers."

HAMPI TIMES Kannada Daily
Print & Digital News Paper

BOOK NOW!
Scan to Read

- Obituary
- Remembrance
- Birthday wish ads
- Events Display &
- Classified ads

# HAMPI TIMES, Bamboo Bazaar, Nr Valmiki Circle, Hosapete-583201, Vijayanagara Dist. 9482599089 / 9448633038

DC & SSLC TOPER TALK
scan to watch video



ಸರ್ಕಾರಿ ಶಾಲೆ, ನಮ್ಮ ಶಾಲೆ
ಗುಣಮಟ್ಟದ ಶಿಕ್ಷಣಕ್ಕೆ ಮೊದಲ ಹೆಜ್ಜೆ
(Government school, our school - the first step towards quality education.)

ಸರ್ಕಾರಿ ಶಾಲೆಗಳಲ್ಲಿ 2025-26ನೇ ಸಾಲಿನ ಪ್ರವೇಶ ಉಚಿತ
FREE Admission

ಬನ್ನಿ, ಬೆಂಬಲಿಸಿ, ಸರ್ಕಾರಿ ಶಾಲೆಗಳನ್ನು ಬಲಪಡಿಸಿ (Come, support, strengthen government schools.) - ಹಂಪಿ ಟೈಮ್ಸ್ ಬಳಗ, ವಿಜಯನಗರ

## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ । ಸಂವತ್ಸರ: ವಿಶ್ವವಸು

**15–06–2025 – ಭಾನುವಾರ**

| | |
|---|---|
| ತಿಥಿ | : ಚತುರ್ಥಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಶ್ರಾವಣ |
| ಯೋಗ | : ಇಂದ್ರ |
| ಕರಣ | : ಬಾಳವ |
| ಸೂರ್ಯೋದಯ | : 05:42:15 |
| ಸೂರ್ಯಾಸ್ತ | : 19:12:48 |
| ರಾಹು ಕಾಲ | : 17:31–19:13 |
| ಯಮಘಂಡ ಕಾಲ | : 12:28–14:09 |
| ಗುಳಿಕ ಕಾಲ | : 15:50–17:31 |

## ತುಂಗಭದ್ರಾ ನೀರಿನ ಮಟ್ಟ



ಶನಿವಾರ : 14–06–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1603.33 ಅಡಿ |
| ಒಳ ಹರಿವು | 6618 ಕ್ಯುಸೆಕ್ |
| ಹೊರ ಹರಿವು | 128 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 26.140 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1582.69 ಅಡಿ |
| ಒಳ ಹರಿವು | 3737 ಕ್ಯುಸೆಕ್ |
| ಹೊರ ಹರಿವು | 10 ಕ್ಯುಸೆಕ್ |
| ಸಾಮರ್ಥ್ಯ | 5.910 ಟಿಎಂಸಿ |

# ಬಾಣಂತಿಯರ ಪೋಷಕರಿಗೆ ತಂಗಲು ಡಾರ್ಮೆಟರಿ ಉದ್ಘಾಟನೆ

### ತಾಯಿ, ಮಕ್ಕಳ ಆಸ್ಪತ್ರೆ ಆವರಣದಲ್ಲಿ ಪೋಷಕರ ವಿಶ್ರಾಂತಿ ಗೃಹ, ನಾಲ್ಕು ಅಂಬ್ಯುಲೆನ್ಸ್‌ಗೆ ಸಂಸದ, ಶಾಸಕ ಚಾಲನೆ



**ಹಂಪಿ ಟೈಮ್ಸ್ ಹೊಸಪೇಟೆ:**
ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಬಾಣಂತಿಯರ ಪೋಷಕರಿಗೆ ಕ್ಷೇಮವಾಗಿ ತಂಗಲು ಡಾರ್ಮೆಟರಿ ಕೊಠಡಿ ನಿರ್ಮಾಣ ಸೇರಿ ಲಾಂಡರಿ ಕೊಠಡಿಗಳು ಹಾಗೂ ಆಂಬ್ಯುಲೆನ್ಸ್‌ಗಳ ಸೇವೆಯನ್ನು ಬಿಎಂಎಂ ಮತ್ತು ಜೆಎಸ್ ಡಬ್ಲ್ಯೂ ಕಾರ್ಖಾನೆಯ ಸಿಎಸ್ ಆರ್ ಯೋಜನೆಯಡಿ ನಿರ್ಮಿಸಿದ್ದು, ಇವುಗಳ ನಿರ್ವಹಣೆಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಶಾಸಕ ಹೆಚ್.ಆರ್. ಗವಿಯಪ್ಪ ಹೇಳಿದರು.

ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆವರಣದಲ್ಲಿ ಏರ್ಪಡಿಸಿದ್ದ 4 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಶನಿವಾರ ಮಾತನಾಡಿದರು,

ತಾಯಿ, ಮಕ್ಕಳ ಆಸ್ಪತ್ರೆಗೆ ಬರುವವರ ಅನುಕೂಲಕ್ಕಾಗಿ ಡಾರ್ಮಟರಿ, ಲಾಂಡರಿ ಕೊಠಡಿಗಳು ಹಾಗೂ ಒಟ್ಟು ನಾಲ್ಕು ಅಂಬ್ಯುಲೆನ್ಸ್‌ಗಳನ್ನು ನೀಡಲಾಗಿದೆ ನಾಲ್ಕು ಕೋಟಿ ವೆಚ್ಚದಲ್ಲಿ ಅನುದಾನ ನೀಡಲಾಗಿದೆ. ಸಾರ್ವಜನಿಕರು ಇವುಗಳ ಸದ್ಬಳಕೆ ಮಾಡಿಕೊಳ್ಳುವ ಜತೆಗೆ ಸರ್ಕಾರಿ ಕಟ್ಟಡಗಳ ಉತ್ತಮ ನಿರ್ವಹಣೆಗೂ ಹೆಚ್ಚಿನ ಆದ್ಯತೆ ನೀಡಬೇಕಿದೆ. ಸ್ಥಳೀಯವಾಗಿ ನನ್ನಿಂದಾಗುವ ಸಹಕಾರವನ್ನು ನೀಡುತ್ತೇನೆ ಎಂದರು.

ಸಂಸದರಾದ ಈ.ತುಕಾರಾಂ ಮಾತನಾಡಿ, ಸಾರ್ವಜನಿಕರ ಅನುಕೂಲಕ್ಕಾಗಿ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರು 2014 ರ ಏಪ್ರಿಲ್ 14 ರಂದು ಯಾವುದೇ ಕಾರ್ಖಾನೆ ಕಂಪನಿಗಳಿಗೆ ಶೇ.2 ರಷ್ಟು ವೈದ್ಯಕೀಯ ಸೇವೆಗಳಿಗೆ ಸಿಎಸ್ ಆರ್ ಅನುದಾನಿತ ಕೆಲಸ ಮಾಡಬೇಕೆಂದು ಕಾಯ್ದೆ ತಂದರು. ಹಾಗಾಗೀ ಬಿಎಂಎಂ ಮತ್ತು ಜೆಎಸ್ ಬ್ಲೂ ಅನುದಾನ ಅಡಿಯಲ್ಲಿ ತಾಯಿ ಮತ್ತು ಮಕ್ಕಳಿಗೆ ಅನುಕೂಲಕ್ಕಾಗಿ ಡಾರ್ಮೆಟರಿ, ಲಾಂಡರಿ ಕೊಠಡಿಗಳಿನ್ನು ನಾಲ್ಕು ಕೋಟಿ ವೆಚ್ಚದಲ್ಲಿ ಮಾಡಿದ್ದಾರೆ. ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕು. ಸರ್ಕಾರಿ ಅಧಿಕಾರಿಗಳು ಜವಾಬ್ದಾರಿಯಿಂದ ನಿರ್ವಹಣೆ ಮಾಡಬೇಕು. ಹಾಗೂ ಸಾರ್ವಜನಿಕರು ಸ್ವಚ್ಛತೆ ರೀತಿಯಿಂದ ಉಪಯೋಗಿಸಕೊಳ್ಳಬೇಕು ಎಂದರು.

ಈ ವೇಳೆಯಲ್ಲಿ ಬಿಎಂಎಂನ ಗಣೇಶ ಹೆಗ್ಡೆ, ಹುಡಾ ಅಧ್ಯಕ್ಷ ಹೆಚ್.ಎನ್.ಎಫ್.ಇಮಾಮ್ ನಿಯಾಜಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಶಂಕರ್ ನಾಯ್ಕ್.ಎಲ್.ಆರ್, ಆರ್‌ಸಿಎಚ್ ಅಧಿಕಾರಿ ಡಾ.ಜಂಬಯ್ಯ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ, ವೈದ್ಯಾಧಿಕಾರಿ ಡಾ.ಭಾಸ್ಕರ್ ಸೇರಿದಂತೆ ವೈದ್ಯಾಧಿಕಾರಿಗಳು, ಆರೋಗ್ಯ ಇಲಾಖೆ ಅಧಿಕಾರಿಗಳು, ಭಾಗವಹಿಸಿದ್ದರು.

# ವಿಜಯನಗರ ಜಿಲ್ಲೆಯಲ್ಲಿ ಮೂವರಿಗೆ ಕೊವಿಡ್ ದೃಢ!

**ಹಂಪಿ ಟೈಮ್ಸ್ ಹೊಸಪೇಟೆ**
ಜಿಲ್ಲೆಯಲ್ಲಿ ಕೊವಿಡ್–19 ಸೋಂಕು ಕಾಣಿಸಿಕೊಂಡಿದ್ದು, ಇಬ್ಬರು ಹೋಮ್ ಐಸೋಲೇಷನ್‌ನಲ್ಲಿದ್ದಾರೆ. ಒಬ್ಬರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸಾರ್ವಜನಿಕರು ಮುಂಜಾಗ್ರತಾ ಕ್ರಮಗಳನ್ನು ಕಡ್ಡಾಯವಾಗಿ ಅನುಸರಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಎಲ್.ಆರ್.ಶಂಕರನಾಯ್ಕ ತಿಳಿಸಿದ್ದಾರೆ.

ಹೊಸಪೇಟೆ ನಗರ ಹಾಗೂ, ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಇತ್ತೀಚೆಗೆ ಕೊವಿಡ್–19 ಸೋಂಕು ಪತ್ತೆಯಾಗಿದೆ. ಇವರಲ್ಲಿ ಲಕ್ಷಣಗಳು ಸೌಮ್ಯವಾಗಿದ್ದ ಇಬ್ಬರು ರೋಗಿಗಳು ಮನೆಯಲ್ಲಿಯೇ ಪ್ರತ್ಯೇಕವಾಗಿ ಇರಲು ಮತ್ತು ಚಿಕಿತ್ಸೆ ಪಡೆಯಲು ನಿರ್ಧರಿಸಿದ್ದಾರೆ. ಹರಪನಹಳ್ಳಿ ತಾಲೂಕಿನಲ್ಲಿ ಮಹಿಳೆಯೊಬ್ಬರಿಗೆ ಶನಿವಾರ ಸೋಂಕು ಕಾಣಿಸಿಕೊಂಡಿದ್ದು, ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. "ಜಿಲ್ಲೆಯಲ್ಲಿ ಮತ್ತೆ ಕೊವಿಡ್ ಪ್ರಕರಣಗಳು ಕಾಣಿಸಿಕೊಂಡಿವೆ. ಜನರು ಆತಂಕ ಪಡುವುದಕ್ಕಿಂತ ಮುಂಜಾಗ್ರತ ಕ್ರಮಗಳನ್ನು ಅನುಸರಿಸಬೇಕು ಎಂದು ಡಿಎಚ್‌ಒ ತಿಳಿಸಿದ್ದಾರೆ.

**ಅನುಸರಿಸಬೇಕಾದ ಮುಂಜಾಗ್ರತಾ ಕ್ರಮಗಳು:** ಜನನಿಬಿಡ ಪ್ರದೇಶಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಪರಸ್ಪರ ಕನಿಷ್ಠ ಆರು ಅಡಿ ಅಂತರ ಕಾಯ್ದುಕೊಳ್ಳಬೇಕು. ಆಗಾಗ್ಗೆ ಸೋಪ್ ಮತ್ತು ನೀರಿನಿಂದ ಕೈ ತೊಳೆಯಬೇಕು ಅಥವಾ ಸ್ಯಾನಿಟೈಸರ್ ಬಳಸಬೇಕು. ಜ್ವರ, ಕೆಮ್ಮು, ಗಂಟಲು ನೋವು, ಉಸಿರಾಟದ ತೊಂದರೆ ಅಥವಾ ಇತರೆ ಕೊವಿಡ್ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣವೇ ಆರೋಗ್ಯ ಇಲಾಖೆಯನ್ನು ಸಂಪರ್ಕಿಸಿ ಪರೀಕ್ಷೆ ಮಾಡಿಸಿಕೊಳ್ಳಬೇಕು.

ಸಾರ್ವಜನಿಕರು ಆರೋಗ್ಯ ಇಲಾಖೆ ನೀಡುವ ಸೂಚನೆಗಳನ್ನು ಪಾಲಿಸುವ ಮೂಲಕ ಕೊವಿಡ್ ಹರಡುವಿಕೆಯನ್ನು ನಿಯಂತ್ರಿಸಲು ಸಹಕರಿಸಬೇಕು. ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿದ್ದು, ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದ್ದಾರೆ.

# ಇರುವ ಸಮಯದಲ್ಲಿ ಉತ್ತಮ ಸೇವೆ ನೀಡಿ



**ಹಂಪಿ ಟೈಮ್ಸ್ ಕೂಡ್ಲಿಗಿ**
ಇರುವ ಸಮಯದಲ್ಲಿಯೇ ಉತ್ತಮ ಸೇವೆ ನೀಡಿ, ಜನರ ಆರೋಗ್ಯ ಸುಧಾರಿಸಿ ಎಂದು ಶಾಸಕ ಡಾ. ಶ್ರೀನಿವಾಸ್ ಎನ್.ಟಿ. ಹೇಳಿದರು.

ಪಟ್ಟಣದ ಕೊತ್ತಲಾಂಜನೇಯ ಸ್ವಾಮಿ ದೇವಸ್ಥಾನದ ಬಳಿ ಶುಕ್ರವಾರ ರಾತ್ರಿ ನಮ್ಮ ಕ್ಲಿನಿಕ್ ಉದ್ಘಾಟಿಸಿ ಅವರು ಮಾತನಾಡಿದರು. ನಿಮ್ಮಲ್ಲಿ ಬರುವ ರೋಗಿಗಳು ನಿಮ್ಮಷ್ಟು ವಿದ್ಯಾವಂತರಾಗಿರುವುದಿಲ್ಲ. ಆದರೆ ಅವರು ಕೆಲವೇ ನಿಮಿಷಗಳಲ್ಲಿ ನಿಮ್ಮ ಸ್ವಾಭಾವವನ್ನು ಅಂದಾಜಿಸುತ್ತಾರೆ. ಇದು ಅನೇಕ ಸಲ ಸರಿಯೂ ಇರುತ್ತದೆ. ಅದ್ದರಿಂದ ರೋಗಿಗಳನ್ನು ಶಾಂತತೆಯಿಂದ ನೋಡಿಕೊಳ್ಳಬೇಕು. ಅಸ್ಪತ್ರೆಗಳಲ್ಲಿನ ಸಮಸ್ಯೆ ಹೇಳಿಕೊಂಡು ನಿತ್ಯವೂ ನಮಗೆ ದೂರು ಬರುತ್ತವೆ. ನೀವು ಸರಿಯಾಗಿ ತಿಳಿ ಹೇಳಿದರೆ ಸಮಸ್ಯೆಗಳನ್ನು ಸರಿಪಡಿಸಿಕೊಳ್ಳಬಹುದು. ದೂರುಗಳು ಕಡಿಮೆಯಾದಷ್ಟು ನಾವು ಜನರ ಆರೋಗ್ಯ ಕಾಪಾಡುತ್ತೇವೆ ಎಂದು ಅರ್ಥ. ನಮ್ಮ ಸಮಸ್ಯೆಯನ್ನು ಜನರು ಕೇಳುವುದಿಲ್ಲ. ಆದರೆ ನಮ್ಮಿಂದ ಅವರು ಹೆಚ್ಚಿನ ಸೇವೆ ನಿರೀಕ್ಷೆ ಮಾಡುತ್ತಾರೆ. ಅದರಿಂದ ಎಲ್ಲವನ್ನು ತೂಗಿಸಿಕೊಂಡು ಹೋಗಬೇಕು ಎಂದು ಸಲಹೆ ನೀಡಿದ ಅವರು, ಕೂಡ್ಲಿಗಿ ಹಾಗೂ ಉಜ್ಜನಿ ಭಾಗದ ಆರೋಗ್ಯ ಸಿಬ್ಬಂದಿಗೆ ಈ ತಿಂಗಳಲ್ಲಿಯೇ ಸನ್ಮಾನ ಏರ್ಪಡಿಸ ಲಾಗುವುದು ಎಂದರು.

ಪಟ್ಟಣ ಪಂಚಾಯ್ತಿ ಅಧ್ಯಕ್ಷ ಕವಲ್ಲಿ ಶಿವಪ್ಪ ನಾಯಕ ಮಾತನಾಡಿ, ನಿಮ್ಮಲ್ಲಿರುವ ಸೇವೆಗಳನ್ನು ಜನರಿಗೆ ನೀಡಿ, ನೀವು ಇದು ಇಲ್ಲ ಅದು ಇಲ್ಲ ಎಂದರೆ ಜನರು ನಿಮ್ಮಲ್ಲಿಗೆ ಬರುವುದಿಲ್ಲ ಎಂದರು.

ಡಿಎಚ್‌ಒ ಡಾ. ಎಲ್. ಶಂಕರ್ ನಾಯ್ಕ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಆರ್ ಸಿ ಎಚ್ ಅಧಿಕಾರಿ ಡಾ. ಜಂಬಯ್ಯ, ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಎಸ್.ಪಿ. ಪ್ರದೀಪ್, ಕಿರಿಯ ಆರೋಗ್ಯ ನಿರೀಕ್ಷಕಿ ಯರಾದ ಪಿ.ಬಿ. ಗಿರಿಜಾ, ಭವ್ಯ, ಸುನಿತಾ, ನಮ್ಮ ಕ್ಲಿನಿಕ್ ವೈದ್ಯ ಡಾ. ಮಮತ, ಪಟ್ಟಣ ಪಂಚಾಯ್ತಿ ಸದಸ್ಯರಾದ ಡಾಣಿ ಚೌಡಮ್ಮ, ಬಸು ನಾಯ್ಕ್, ಇತರರಿದ್ದರು.

14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

# ರುದ್ರಭೂಮಿ ಒತ್ತುವರಿ ತಡೆದು ಉಳಿಸಿಕೊಡಿ



**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**
ಪಟ್ಟಣದ 122/3 ರ ಸರ್ವೇ ನಂಬರ್‌ನಲ್ಲಿ ನಮ್ಮ ಪೂರ್ವಜರ ಕಾಲದಿಂದಲೂ ಇಂದಿಗೂ ಇದೇ ಸ್ಥಳದಲ್ಲಿ ಶವಸಂಸ್ಕಾರ ನಡೆಸಲಾಗಿದ್ದು. ಇಲಾಖಾಧಿಕಾರಿಗಳಿಗೆ ಸುಮಾರು ವರ್ಷಗಳಿಂದ ಈ ಭೂಮಿಯನ್ನೂ ರುದ್ರ ಭೂಮಿಗೆ ಮೀಸಲಿಡುವಂತೆ ಹಲವು ಬಾರಿ ಮನವಿ ಮಾಡಿದರೂ, ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಈಗಲಾದರೂ ಈಗಿರುವ ರುದ್ರಭೂಮಿಯನ್ನೂ ಮಿಸಲಿಟ್ಟು ಅಭಿವೃದ್ಧಿ ಪಡಿಸಬೇಕೆಂದು ಇಲ್ಲಿನ 14ನೇವಾರ್ಡಿನ (ಹಳೆಊರು) ಸಾರ್ವಜನಿಕರು ರುದ್ರಭೂಮಿಯಲ್ಲೆ ನಿಂತು ಆಗ್ರಹಿಸಿದರು.

2009ರಲ್ಲಿ ತಾಲ್ಲೂಕು ಸರ್ವೆಯರ್ ಸರ್ವೇಕಾರ್ಯ ನಡೆಸಿ 4 ಎಕರೆ ಜಾಗವನ್ನು ಮಿಸಲಿರಿಸಲು ವರದಿಯನ್ನು ತಯಾರುಮಾಡಿದ್ದರು. ನಂತರ ದಿನಗಳಲ್ಲಿ ಅದರ ಬಗ್ಗೆ ಏನಾಯಿತೆಂದು ತಿಳಿಯದಾಗಿದೆ. ಸ್ಮಶಾನಕ್ಕೆ ಯಾವುದೇ ಧಾಖಲೆ ಇಲ್ಲದಿರುವುದರಿಂದ ಕೆಲವರು ಅದರ ಪಕ್ಕದಲ್ಲೇ ಇರುವ ಜಾಗದಲ್ಲಿ ಮನೆಗಳನ್ನು ನಿರ್ಮಿಸಿ ಕೊಳ್ಳುತ್ತಿರು ವುದರಿಂದ ಮುಂದಿನ ದಿನಗಳಲ್ಲಿ ಶವಸಂಸ್ಕಾರ ನಡೆಸಲು ಸ್ಥಳವಕಾಶ ಇಲ್ಲದಂತಾಗುತ್ತದೆ ಎಂಬುದು ನಮ್ಮ ಆತಂಕ ಹೀಗಾಗಿ ಸಂಬಂಧಪಟ್ಟವರು ಕೂಡಲೇ ಮತ್ತೊಮ್ಮೆ ಸರ್ವೇ ನಡೆಸಿ ಸ್ಮಶಾನ ಒತ್ತುವರಿಯಾಗದಂತೆ ಸ್ಥಳ ನಿಗಧಿ ಮಾಡಲು ರುದ್ರಭೂಮಿಯಲ್ಲಿ ಗ್ರಾಮಸ್ಥರು ಆಗ್ರಹಿಸಿದರು.

**ಅಮೃತ್ 2 ಯೋಜನೆಯ ಶುದ್ಧ ಕುಡಿಯುವ ನೀರಿನ ಘಟಕದ ಕಾಮಗಾರಿಯು ನಮ್ಮ ಪೂರ್ವಜರ ಸಮಾದಿಗಳ ಮೇಲೆ ನಡೆಯುತ್ತಿದೆ. ಸುಮಾರು 1.5 ಎಕರೆಯಷ್ಟು ಪ್ರದೇಶದಲ್ಲಿ 10 ರಿಂದ 15ಅಡಿ ಎತ್ತರದಷ್ಟು ಮಣ್ಣು, ಕಲ್ಲುಗಳನ್ನು ಸಮಾದಿಗಳ ಮೇಲೆ ಹಾಕಿ ನಾಶಮಾಡಿದ್ದಾರೆ. ಇದರಿಂದ ನಮಗೆ ಮಾನಸಿಕ ನೋವಾಗಿದೆ, ಕೂಡಲೇ ಕಾಮಗಾರಿಯ ಗುತ್ತಿಗೆದಾರರು, ಸಮಾಧಿಗಳಿಗೆ ಹಾನಿಯಾಗದಂತೆ ಅದನ್ನು ತೆರವುಗೊಳಿಸಬೇಕು. ಅಧಿಕಾರಿಗಳು ಈ ಕುರಿತು ಗಮನಿಸಿ, ಗುತ್ತಿಗೆದಾರರಿಗೆ ಸೂಚನೆ ನೀಡಬೇಕು ಇಲ್ಲವಾದಲ್ಲಿ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದು ಗ್ರಾಮಸ್ಥರು ಎಚ್ಚರಿಸಿದ್ದಾರೆ.**

"ಹಳೆ ಊರು ಅಂದು ಕೇವಲ 30–40ಮನೆಗಳನ್ನು ಹೊಂದಿದ ಗ್ರಾಮವಾಗಿತ್ತು. ಅಂದು ಶವಸಂಸ್ಕಾರಕ್ಕೆ ಇದೊಂದೇ ರುದ್ರಭೂಮಿ ಇತ್ತು, ಆಗ ನಮ್ಮ ಹಿರಿಯರಿಗೆ ಇದೇ ಸ್ಥಳದಲ್ಲಿ ಎಲ್ಲಾ ಸಮುದಾಯದವರ ಶವ ಸಂಸ್ಕಾರ ಮಾಡುತ್ತಾ ಬಂದಿದ್ದೇವೆ. ಇದು ಈಗ ಒತ್ತುವರಿಯಾಗುವ ಆತಂಕ ಕಾಡುತ್ತಿದೆ. ಈಗಲಾದರೂ ಅಧಿಕಾರಿಗಳು ಈ ರುದ್ರಭೂಮಿ ಸಾರ್ವಜನಿಕ ರುದ್ರ ಭೂಮಿ ಎಂದು ನಿಗದಿಪಡಿಸಿ ಪಹಣಿ ಮಾಡಿ ಅಧಿಕೃತಗೊಳಿಸಬೇಕು."
**– ಎಂ.ರಾಮಾಂಜನೇಯ,ಹೆಚ್. ದುರುಗಪ್ಪ, ಪೂಜಾರ ಬಸವರಾಜ,ಅಂಜಿನಪ್ಪ.**

ಈ ಸಂಧರ್ಭದಲ್ಲಿ ಪಟ್ಟಣ ಪಂಚಾಯಿತಿ ಸದಸ್ಯ ಮರಡಿ ಸುರೇಶ, ಎಂ.ರಾಮಾಂಜಿನೇಯ, ನಾಗರಾಜ, ತಳವಾರ್ ಹನುಮಂತಪ್ಪ, ಬಿ.ರಾಮಪ್ಪ, ಬಿ.ವೆಂಕಟೇಶ್, ಎಂ.ಅಂಜಿನಪ್ಪ, ಬಿ.ಗಾಳೆಪ್ಪ,ಟಿ ಹನುಮಂತ, ಗಂಗಾಧರ, ತಳವಾರ ದುರುಗಪ್ಪ, ದುರುಗಪ್ಪ, ರಾಮಪ್ಪ, ರವಿ,ಹರೀಶ್, ಸೋಮಪ್ಪ, ಲಕ್ಷ್ಮೀದೇವಿ,ಶಾರದಮ್ಮ, ಹುಲಿಗೆಮ್ಮ, ಅಂಜಿನಮ್ಮ, ಸೋಮಕ್ಕ ರೇಣುಕಮ್ಮ, ನಿಂಗಮ್ಮ,ಹಂಪಮ್ಮ, ದುರುಗಮ್ಮ ಸೇರಿದಂತೆ ಇತರರಿದ್ದರು.

HAMPI TIMES VIJAYANAGARA
ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ
Searching for the perfect platform to promote your brand?
Want to reach more people?
Choose HAMPI TIMES
Scan to read epaper



HAMPI TIMES
Kannada Daily News paper
Print & Digital Edition
Contact : 94486 33038
E-mail: hampitimes@gmail.com
www.hampitimes.com